ಸ್ವಾಯತ್ತತೆ ಸ್ವಯಂ ಆಡಳಿತ ಸ್ವಯಂ ನಿಯಂತ್ರಣ ನಮ್ಮ ಧ್ಯೇಯ

ಸ್ವಾಭಿಮಾನಿ ಸಹಕಾರಿ

ಗಣರಾಜ್ಯ ದಿನ

ಜನವರಿ – 2013

ಸಂಪುಟ 11 * ಸಂಚಿಕೆ 1 * ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ * ವಾರ್ಷಿಕ ಚಂದಾ 100/– * ಬೆಲೆ ರೂ. 12/– * ಪುಟಗಳು 20

"ಸತ್ಯಕ್ಕಾಗಿ ಯಾವುದನ್ನಾದರೂ ತ್ಯಾಗಮಾಡಿ; ಆದರೆ ಯಾವುದಕ್ಕಾದರೂ ಸತ್ಯವನ್ನು ತ್ಯಾಗಮಾಡಬೇಡಿ."

– ಸ್ವಾಮಿ ವಿವೇಕಾನಂದ

ಸ್ವಾಮಿ ವಿವೇಕಾನಂದರ 150ನೇ ಜನ್ಮ ಸ್ಮರಣೆ

ಸೌಹಾರ್ದ ಸಹಕಾರಿ ದಿನ,

ಸಂಕ್ರಾಂತಿ ಹಾಗೂ

ಈದ್‌ಮಿಲಾದ್ ಶುಭಾಶಯಗಳು

ಅಧ್ಯಕ್ಷರು, ಉಪಾಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಆಡಳಿತ ಮಂಡಳಿ.

ಸೌಹಾರ್ದ ಸಹಕಾರಿಗಳ ಸಂಖ್ಯೆ : 2320 - 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ - 483

ನಮ್ಮ ಇದುವರೆಗಿನ ಕಾರ್ಯಚಟುವಟಿಕೆಗಳ ಹಾಗೂ ಮುಂಬರುವ ದಿನಗಳಲ್ಲಿ ಸಹಕಾರ ಕ್ಷೇತ್ರದ ಕಾರ್ಯವಿಧಾನದ ವೈಖರಿ ಮುಂತಾದ ವಿಷಯಗಳ ಬಗ್ಗೆ ಸಹಕಾರಿಗಳು ಅವಲೋಕನೆ ಮಾಡಬೇಕಾದ ಪರ್ವಕಾಲ ಇದಾಗಿದೆ. 2012 ರಲ್ಲಿ ದೇಶದ 97ನೇ ಸಂವಿಧಾನದ ತಿದ್ದುಪಡಿ ಜಾರಿಯಾಗಿದೆ.

ಅವಲೋಕನೆಯ ಪರ್ವಕಾಲ

ರಾಜ್ಯದ ಎಲ್ಲ ಸಹಕಾರಿ ಬಂಧುಗಳಿಗೆ 2013 ನೂತನ ವರ್ಷದ ಹಾಗೂ ಮಕರ ಸಂಕ್ರಾಂತಿಯ ಶುಭಾಶಯಗಳು. ಸಂಕ್ರಾಂತಿಯ ಹಬ್ಬವು ಎಳ್ಳು ಬೆಲ್ಲವನ್ನು ಹಂಚಿಕೂಂಡು ಎಲ್ಲರ ಬಾಳಿನಲ್ಲಿ ಸಿಹಿ ಕಂಡುಕೊಳ್ಳುವ ಸಂಭ್ರಮದ ಸಡಗರದ ಹಬ್ಬ. ರಾಜ್ಯದ ಎಲ್ಲ ಸಹಕಾರಿ ಸಂಸ್ಥೆಗಳು ನೂತನ ಸಾಲಿನಲ್ಲಿ ಉತ್ತಮ ಪ್ರಗತಿಯತ್ತ ಸಾಗುವ ಪ್ರತಿಜ್ಞೆಯನ್ನು ಸ್ವೀಕರಿಸಿ ಕಾರ್ಯನಿರ್ವಹಿಸುವ ಸಮಯ.

ಪ್ರತಿವರ್ಷದಂತೆ ಈ ಭಾರಿಯು ಸಹ ಜನವರಿ 1 ರಂದು ಸೌಹಾರ್ದ ಸಹಕಾರಿ ದಿನವನ್ನು ಎಲ್ಲ ಸಹಕಾರಿಗಳು ಆಚರಿಸಬೇಕು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾದ ಸಭೆ ಸಮಾರಂಭಗಳನ್ನು ಹಾಗೂ ಸಹಕಾರಿಯ ಅಸ್ತಿತ್ವದ ಬಗ್ಗೆ ಮತ್ತು ಕಾರ್ಯಚಟುವಟಿಕೆಗಳ ಬಗ್ಗೆ ವ್ಯಾಪಕ ಪ್ರಚಾರವನ್ನು ಮಾಡುವುದರ ಮೂಲಕ ಸದಸ್ಯರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವಂತೆ ಕಾರ್ಯನಿರ್ವಹಿಸಬೇಕು.

ಅಂತರ ರಾಷ್ಟ್ರೀಯ ಸಹಕಾರಿಗಳ ವರ್ಷ 2012 ಮುಕ್ತಾಯವಾಗಿದೆ. ದೇಶದ ಸಮಸ್ತ ಸಹಕಾರಿಗಳಲ್ಲಿ ಸಹಕಾರ ಸಿಂಚನ ಮೂಡಿಸುವಲ್ಲಿ ಯಶಸ್ವಿಯಾಗಿದೆ. ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಅನೇಕ ಕಾರ್ಯಕ್ರಮಗಳು ನಡೆದು ಸಹಕಾರ ಕ್ಷೇತ್ರದ ಅಭಿವೃದ್ಧಿಯ ಪಥವನ್ನು ಸುಭದ್ರ ಹಾಗೂ ಸುಗಮಗೊಳಿಸಿದೆ.ಸಹಕಾರಿಗಳಿಗೆ ಈ ಅವಕಾಶವನ್ನು ಒದಗಿಸಿದ್ದಕ್ಕಾಗಿ ವಿಶ್ವ ಸಂಸ್ಥೆಗೆ ಸಮಸ್ತ ಸಹಕಾರಿಗಳ ಪರವಾಗಿ ಅಭಿನಂದನೆಗಳು.

2011–12ನೇ ಸಾಲಿನಲ್ಲಿ ನಾಲ್ಕನೇಯ ಮೂರು ಭಾಗದ (3/4) ಅವಧಿಯನ್ನು ಪೂರೈಸಿದ್ದೆವೆ. ಈ ಅವಧಿಯಲ್ಲಿ ಸಹಕಾರ ಕ್ಷೇತ್ರದಲ್ಲಿ ಅತ್ಯಂತ ಮಹತ್ವದ ಬದಲಾವಣೆಗಳಾಗಿವೆ. ನಮ್ಮ ಇದುವರೆಗಿನ ಕಾರ್ಯಚಟುವಟಿಕೆಗಳ ಹಾಗೂ ಮುಂಬರುವ ದಿನಗಳಲ್ಲಿ ಸಹಕಾರ ಕ್ಷೇತ್ರದ ಕಾರ್ಯವಿಧಾನದ ವೈಖರಿ ಮುಂತಾದ ವಿಷಯಗಳ ಬಗ್ಗೆ ಸಹಕಾರಿಗಳು ಅವಲೋಕನೆ ಮಾಡಬೇಕಾದ ಪರ್ವಕಾಲ ಇದಾಗಿದೆ. 2012ರಲ್ಲಿ ದೇಶದ 97ನೇ ಸಂವಿಧಾನದ ತಿದ್ದುಪಡಿ ಜಾರಿಯಾಗಿದೆ. ಸಹಕಾರ ಕ್ಷೇತ್ರಕ್ಕೆ ಮಾನ್ಯತೆ ನೀಡಲಾಗಿದೆ.

ಸಹಕಾರಿಗಳಿಗೆ ಆಡಳಿತ ಹಾಗೂ ವ್ಯವಹಾರಿಕ ಸ್ವಾತಂತ್ರವನ್ನು ನೀಡುವುದರ ಜೊತೆಗೆ ಹೆಚ್ಚಿನ ಜವಾಬ್ದಾರಿಯನ್ನು ನೀಡಿರುವುದು ಸಹಕಾರಿಗಳಿಗೆ ಸಂತೋಷವನ್ನುಂಟು ಮಾಡಿದೆ ಹಾಗೂ ಸಹಕಾರಿ ಕರ್ತವ್ಯ ಪ್ರಜ್ಞೆಯನ್ನು ಹೆಚ್ಚಿಸಿದೆ.

ಮುಂಬರುವ ದಿನಗಳಲ್ಲಿ ವಾರ್ಷಿಕ ಮಹಾಸಭೆಯನ್ನು ಮುಂದೂಡುವ ಅಧಿಕಾರ ಯಾರಿಗೂ ನೀಡಲಾಗಿಲ್ಲ. ಸೆಪ್ಟೆಂಬರ 25ರ ಒಳಗಾಗಿ ರಾಜ್ಯದ ಪ್ರತಿಯೊಂದು ಸಹಕಾರಿ ಸಂಸ್ಥೆಗಳು ವಾರ್ಷಿಕ ಮಹಾ ಸಭೆಯನ್ನು ನಡೆಸಲೇ ಬೇಕು. ಅದೇ ರೀತಿಯಲ್ಲಿ ಲೆಕ್ಕ ಪರಿಶೋಧನೆ ಕಡ್ಡಾಯವಾಗಿ ಸನ್ನದು ಲೆಕ್ಕಪರಿಶೋಧಕರಿಂದ ಆಗಲೆ ಬೇಕು. ಸಹಕಾರಿ ಚುನಾವಣೆಗಳನ್ನು (ಪದಾಧಿಕಾರಿಗಳ ಚುನಾವಣೆಯು ಸೇರಿದಂತೆ) ನಡೆಸಿಕೊಡಲು ಪ್ರತ್ಯೇಕ ಚುನಾವಣಾ ಆಯೋಗದ ರಚನೆ, ಅವಕಾಶವಾಗಿರುವುದು ಪ್ರಾತಿನಿಧ್ಯಿಕ ಸರ್ವ ಸಭೆ ಆಡಳಿತ ಮಂಡಳಿ ಸದಸ್ಯರಲ್ಲಿ ಎಸ್.ಸಿ ಎಸ್.ಟಿ ಯವರಿಗೆ, ಮಹಿಳೆಯರಿಗೆ ಹಾಗೂ ಹಿಂದುಳಿದ ವರ್ಗದವರಿಗೆ ಅವಕಾಶವಾಗಿರುವುದು ಸಹಕಾರಿಗಳ ಆಡಳಿತದಲ್ಲಿ ಪಾರದರ್ಶಕತೆ ತರುವಲ್ಲಿ ಮಹತ್ವದ ಸಾಧನೆ ಹಾಗೂ ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗೆ ಪೂರಕವಾಗಿದೆ ಎಂಬುದನ್ನು ಸಹಕಾರಿಗಳು ಗಮನಿಸಿ ಕಾರ್ಯನಿರ್ವಹಿಸುವ ಸಮಯ ಇದಾಗಿದೆ, ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ನಾವೆಲ್ಲ ಒಂದಾಗಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಕ್ರಮವಿಡೋಣ.

– ಎಸ್.ಆರ್.ಸತೀಶಚಂದ್ರ

ನೂತನ ಕ್ಯಾಲೆಂಡರ್ ಬಿಡುಗಡೆ

ಸಂಯುಕ್ತ ಸಹಕಾರಿಯ ನೂತನ ಕ್ಯಾಲೆಂಡರನ್ನು ಸನ್ಮಾನ್ಯ ಉಪ ಮುಖ್ಯ ಮಂತ್ರಿಗಳಾದ ಕೆ.ಎಸ್.ಈಶ್ವರಪ್ಪನವರು ಬಿಡುಗಡೆ ಮಾಡಿದ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್‌ಚಂದ್ರ, ನಿರ್ದೇಶಕ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್ ಇದ್ದಾರೆ.

ಸಹಕಾರ ಭಾರತಿಯ 4ನೇ ರಾಷ್ಟ್ರೀಯ ಅಧಿವೇಶನ

ರಾಷ್ಟ್ರದಲ್ಲಿ ಸಹಕಾರ ಕ್ಷೇತ್ರದ ಅತಿದೊಡ್ಡ ಸ್ವಯಂಸೇವಾ ಸಂಸ್ಥೆಯಾಗಿರುವ **ಸಹಕಾರ ಭಾರತಿಯ 4ನೇ ರಾಷ್ಟ್ರೀಯ ಸಹಕಾರಿ ಅಧಿವೇಶನವು 17,18,19 ಜನೆವರಿ 2013ರಂದು ಬೆಂಗಳೂರಿನ ನ್ಯಾಷನಲ್ ಹೈಸ್ಕೂಲ ಮೈದಾನದಲ್ಲಿ ನಡೆಯಲಿದೆ.**

ಸಹಕಾರ ಕ್ಷೇತ್ರದ ಜ್ವಲಂತ ಸಮಸ್ಯೆಗಳ ಬಗ್ಗೆ ವಿಶೇಷವಾಗಿ ನೇರ ತೆರಿಗೆ ಸಂಹಿತೆಯನ್ನು ಸಹಕಾರ ಕ್ಷೇತ್ರಕ್ಕೆ ಅನ್ವಯಿಸದಿರುವಂತೆ ಒತ್ತಾಯಿಸುವುದು, ಸಂವಿಧಾನದ 97ನೇ ತಿದ್ದುಪಡಿಯಿಂದ ರಾಷ್ಟ್ರದ ಸಹಕಾರ ಕ್ಷೇತ್ರಕ್ಕೆ ಆಗಿರುವ ಅನುಕೂಲತೆಗಳ ಬಗ್ಗೆ, ಸಹಕಾರ ಕ್ಷೇತ್ರ ಇರುವ ಸವಾಲುಗಳು ಹಾಗೂ ಅವಕಾಶಗಳು ಮುಂತಾದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸೂಕ್ತ ಕ್ರಮವಿಡುವಂತೆ ಕೇಂದ್ರ ಹಾಗೂ ರಾಜ್ಯ ಸರಕಾರಗಳನ್ನು ವಿನಂತಿಸುವುದು. ಈ ಕಾರ್ಯಕ್ರಮದಲ್ಲಿ ಹೊರ ರಾಜ್ಯಗಳಿಂದ 5000ಕ್ಕೂ ಹೆಚ್ಚು ಪ್ರತಿನಿಧಿಗಳು ಹಾಗೂ ಕರ್ನಾಟಕದಿಂದ 5000 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ದಿನಾಂಕ 17/1/2013 : ಸಹಕಾರ ಭಾರತಿ ರಾಷ್ಟ್ರೀಯ ಅಧ್ಯಕ್ಷ ಶ್ರೀ ಸತೀಶ ಮರಾಠೆ ಯವರಿಂದ ಧ್ವಜಾರೋಹಣ. ನಂತರ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ರಾಷ್ಟ್ರೀಯ ಅಧ್ಯಕ್ಷ ಶ್ರೀ ಹೆಚ್.ಕೆ.ಪಾಟೀಲರವರು ವಸ್ತುಪ್ರದರ್ಶನವನ್ನು ಉದ್ಘಾಟಿಸುವರು.

ದಿನಾಂಕ 18/1/2013 : ಕಾರ್ಯಕ್ರಮದ ಉದ್ಘಾಟನೆಯನ್ನು ಆರ್.ಎಸ್.ಎಸ್.ನ ಸರಸಂಘಚಾಲಕ ಶ್ರೀ ಮೋಹನ ಭಾಗವತರವರು ಮಾಡಲಿದ್ದಾರೆ. ರಾಜ್ಯದ ಮುಖ್ಯಮಂತ್ರಿ ಶ್ರೀ ಜಗದೀಶ ಶೆಟ್ಟರ್‌ರವರು, ಸಂಸದ ಶ್ರೀ ಅನಂತಕುಮಾರವರು ಮುಖ್ಯ ಅತಿಥಿಗಳಾಗಿ, ರಾಷ್ಟ್ರದ ಹಾಗೂ ರಾಜ್ಯದ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.

ದಿನಾಂಕ 19/1/2013 : ಸಮಾರೋಪ ಕಾರ್ಯಕ್ರಮದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗಡೆಯವರು, ಮಾಜಿ ಕೇಂದ್ರ ಮಂತ್ರಿ ಶ್ರೀ ಸುರೇಶ ಪ್ರಭುರವರು ಭಾಗವಹಿಸಲಿದ್ದಾರೆ.

ರಾಷ್ಟ್ರೀಯ ಕಾರ್ಯಕಾರಣಿ ಘೋಷಣೆ
ಚಾರಿತ್ರಿಕ ಅಧಿವೇಶನಕ್ಕೆ ಸಹಕಾರಿ ಬಂಧುಗಳಿಗೆ ಹಾರ್ಧಿಕ ಸ್ವಾಗತ. ದಯವಿಟ್ಟು ಪಾಲ್ಗೊಳ್ಳಿರಿ, ಸಹಕಾರ ರಂಗ ಮುನ್ನಡೆಸಿರಿ.

ಇದೇ ಸಂದರ್ಭದಲ್ಲಿ ಒಂದು ಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಲಾಗುವುದು .ಇದೊಂದು ಐತಿಹಾಸಿಕ ಸಮ್ಮೇಳನವಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಸಹಕಾರಿಗಳು ಭಾಗವಹಿಸಿ ಸಹಕಾರ ಕ್ಷೇತ್ರವನ್ನು ಬಲಪಡಿಸುವ ಈ ಪ್ರಯತ್ನಕ್ಕೆ ಸಹಕರಿಸಿ ಎಂದು ಸಹಕಾರ ಭಾರತಿಯ ರಾಷ್ಟ್ರೀಯ ಅಧ್ಯಕ್ಷ ಶ್ರೀ ಸತೀಶ ಮರಾಠೆಯವರು ತಿಳಿಸಿದ್ದಾರೆ.

ರಾಷ್ಟ್ರದ ವಿವಿಧ ಭಾಗಗಳಿಂದ ಈ ಸಮಾವೇಶದಲ್ಲಿ ಭಾಗವಹಿಸಲು ಆಗಮಿಸುವ ಸಹಕಾರಿ ಪ್ರತಿನಿಧಿಗಳನ್ನು ಸ್ವಾಗತಿಸುವ ಸತ್ಕರಿಸುವ ಕರ್ನಾಟಕದ ಜನರ ಹೃದಯ ಶ್ರೀಮಂತಿಕೆಯನ್ನು ವ್ಯಕ್ತಪಡಿಸುವ ಸದವಕಾಶ ನಮಗೆ ಒದಗಿ ಬಂದಿದೆ.

ಆದ್ದರಿಂದ ಕರ್ನಾಟಕದ ಎಲ್ಲ ಸಹಕಾರಿಗಳು ಸಹಕಾರ ಭಾರತಿಯ ಈ ಪ್ರಯತ್ನದಲ್ಲಿ ಸಹಕರಿಸಿ ಎಂದು ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಆರ್. ಎಂ. ಮಂಜುನಾಥಗೌಡ, ರಾಷ್ಟ್ರೀಯ ಸಂಚಾಲಕರಾದ ಶ್ರೀ ಕೊಂಕೋಡಿ ಪದ್ಮನಾಭ, ಪ್ರಧಾನ ಕಾರ್ಯದರ್ಶಿ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ಕರ್ನಾಟಕ ಪ್ರಾಂತ ಸಂಚಾಲಕ ಶ್ರೀ ಎಸ್.ಆರ್.ಸತೀಶ್‌ಚಂದ್ರ ಇವರುಗಳು ಸಹಕಾರಿಗಳಲ್ಲಿ ಮನವಿ ಮಾಡಿದ್ದಾರೆ. ಪ್ರತಿನಿಧಿಗಳಿಗೆ ಊಟದ ವ್ಯವಸ್ಥೆ ಇರುತ್ತದೆ. ಪ್ರತಿನಿಧಿ ಶುಲ್ಕ ರೂ.200 ಮಾತ್ರ, ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ ದೂ : 26610414.

ಸೇನಾಭರ್ತಿ ಪೂರ್ವಭಾವಿ ತರಬೇತಿಗೆ ಕವಲೇದುರ್ಗ ಸೌಹಾರ್ದ ಸಹಕಾರಿಯಲ್ಲಿ ಡಾ. ಆರ್.ಎಂ. ಮಂಜುನಾಥಗೌಡರಿಂದ ವಿದ್ಯುಕ್ತ ಚಾಲನೆ

ತೀರ್ಥಹಳ್ಳಿ, ಡಿ.15 : ಸಹಕಾರ ಕ್ಷೇತ್ರದಲ್ಲಿ ಇಂತಹ ಸಮಾಜದ ಅಭ್ಯುದಯಕ್ಕೆ ಪೂರಕವಾದ ಸಮಾಜ ಸೇವಾ ಕಾರ್ಯಗಳನ್ನು ಹಮ್ಮಿಕೊಳ್ಳುತ್ತಿರುವುದು ಕವಲೇದುರ್ಗ ಸೌಹಾರ್ದ ಸಹಕಾರಿ ಮಾತ್ರ; ಈ ಹಿಂದೆ ಆಯೋಜಿಸಿದ್ದ ಐ.ಎ.ಎಸ್./ ಐ.ಪಿ.ಎಸ್. ತರಬೇತಿ ಶಿಬಿರವನ್ನು ನೆನಪಿಸಿಕೊಂಡು ಕವಲೇದುರ್ಗ ಸೌಹಾರ್ದ ಸಹಕಾರಿ ಹಾಗೂ ಭಂಟರ ಸಂಘದವರು ಹಮ್ಮಿಕೊಂಡ ಈ ಕಾರ್ಯಕ್ರಮ ಅಭಿನಂದನೀಯ ಎಂದು ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್ ಹಾಗೂ ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಡಾ. ಆರ್.ಎಂ. ಮಂಜುನಾಥಗೌಡರು ಅಭಿಪ್ರಾಯಿಸಿದರು.

ನಂತರ ಮುಖ್ಯ ಅತಿಥಿಗಳಾಗಿ ಮಾತನಾಡಿದ ಶಾಸಕರಾದ ಶ್ರೀ ಕಿಮ್ಮನೆ ರತ್ನಾಕರ್‌ರವರು ದೇಶ ರಕ್ಷಣೆಯಂತಹ ಪವಿತ್ರವಾದ ಕಾರ್ಯದಲ್ಲಿ ಅತಿ ಹೆಚ್ಚಿನ ಸಂಖ್ಯೆಯ ಸೈನಿಕರು ಪಂಜಾಬ್ ಮತ್ತು ಹರಿಯಾಣ ರಾಜ್ಯಗಳವರು ಎಂದು ತಿಳಿಸಿ ನಮ್ಮ ರಾಜ್ಯದಲ್ಲಿ ಯಾವುದೇ ಹುದ್ದೆಗೆ ಪೂರ್ವಭಾವಿ ತರಬೇತಿಯ ಕೊರತೆಯಿದ್ದು ನಮ್ಮ ಯುವಕರಿಗೆ ಇಂತಹ ಹುದ್ದೆಗಳು ದೊರಕ್ಕುತ್ತಿಲ್ಲ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕವಲೇದುರ್ಗ ಬಹು ಉದ್ದೇಶಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಎಂ. ಲಕ್ಷ್ಮೀನಾರಾಯಣ್‌ರವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಈ ತರಬೇತಿಯ ಅಗತ್ಯತೆ ಹಾಗೂ ತರಬೇತಿಯ ರೂಪುರೇಷಗಳ ಬಗ್ಗೆ ವಿವರಣೆ ನೀಡಿದರು.

ಶ್ರೀ ಪೂರ್ಣಾನಂದ ಸಹಕಾರಿ – ಬಿಜೈ ಶಾಖೆ

ಗ್ರಾಹಕರ ಹೆಚ್ಚಿನ ಅನೂಕೂಲತೆಗಾಗಿ ಶ್ರೀ ಪೂರ್ಣಾನಂದ ವಿ.ಸೌ ಸಹಕಾರಿ ಬಿಜೈ ಶಾಖೆಯನ್ನು ಹತ್ತಿರದ ಪಿರೇರ ಪರ್ಲ್ಸ್ ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು. ಇದೇ ದಿನಾಂಕ 7 ರಂದು ನಡೆದ ಸಮಾರಂಭದಲ್ಲಿ ಮೇಯರ್ ಶ್ರೀಮತಿ ಗುಲ್ಜಾರ್ ಬಾನು, ಮಹಾನಗರ ಪಾಲಿಕೆ ಸದಸ್ಯ ಶ್ರೀ ಪ್ರವೀಣ್ ಶ್ರೀಯುತರಾದ ಪ್ರಕಾಶ್ ರಾವ್, ವೆಂಕ ಶೆಟ್ಟಿಗಾರ್, ಡಾ. ಜಿ.ಎಲ್.ಪಿರೇರ, ರೊನಾಲ್ಡ್ ಹೆರಿ ಡಿ'ಸೋಜ, ಪ್ರಶಾಂತ್ ರೈ, ಶ್ರೀಮತಿ ಭಾರತಿ ಪ್ರದೀಪ್, ಶ್ರೀಮತಿ ಎಸ್.ವೈಶಾಲಿ ನಾಯಕ್ ಇವರುಗಳು ಭಾಗವಹಿಸಿದರು.ಉಪಾಧ್ಯಕ್ಷರಾದ ಗಣೇಶ್ ಶೆಣೈ ರವರು ವಂದಿಸಿದರು.

ಸಂಭ್ರಮದ ಸೌಹಾರ್ದ ಸಹಕಾರಿ ದಿನಾಚರಣೆ

ಬೆಳಗಾವಿ ವಿಭಾಗದ ಬೆಳಗಾವಿ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಪರಮಾನಂದ ಕೆ. ಗೋಧವಾಣಿ ರವರು ನೇರವೇರಿಸಿಕೊಟ್ಟರು. ಕರ್ನಾಟಕ ಸರಕಾರವು ರಾಜ್ಯದಲ್ಲಿ ಸೌಹಾರ್ದ ಕಾಯ್ದೆಯನ್ನು ಜಾರಿಗೊಳಿಸಿ ಕರ್ನಾಟಕದಲ್ಲಿ ಸಹಕಾರಿ ಸಂಸ್ಥೆಗಳ ಉತ್ತಮ ಬೆಳವಣಿಗೆಗೆ ಮತ್ತು ನಿಸ್ವಾರ್ಥ ಸೇವೆ ಮನೋಭಾವದ, ಉತ್ತಮ ಧ್ಯೆಯಧೋರಣೆಗಳನ್ನು ಹೊಂದಿದ ಸಹಕಾರಿ ಧುರೀಣರಿಗೆ ಸಹಕಾರ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸುವ ಸದಾವಕಾಶವನ್ನು ಮಾಡಿಕೊಟ್ಟಿರುತ್ತದೆ. ಎಂದು ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ದಿನಾಂಕ : 01.01.2013 ರಂದು ಸೌಹಾರ್ದ ಸಹಕಾರಿ ದಿನಜ ಧ್ವಜಾರೋಹಣ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲ್‌ರವರು ನೆರವೇರಿಸಿದರು.

ದಿ : 01–01–2013ರಂದು ಸೌಹಾರ್ದ ಸಹಕಾರಿ ದಿನವನ್ನು ಗುಲಬರ್ಗಾ ವಿಭಾಗೀಯ ಕಛೇರಿಯಲ್ಲಿ ಸಹಕಾರಿ ಧ್ವಜವನ್ನು ಧ್ವಜಾರೋಹಣ ಮಾಡುವುದರ ಮೂಲಕ ಆಚರಿಸಲಾಯಿತು.

ಜನವರಿ ಮಾಹೆಯ ತರಬೇತಿ ಕಾರ್ಯಕ್ರಮಗಳು

ತರಬೇತಿದಾರರ ತರಬೇತಿ 21, 22ನೇ ಜನವರಿ 2013 :

ಸಂವಿಧಾನದ 97ನೇ ತಿದ್ದುಪಡಿಯ ಹಿನ್ನೆಲೆಯಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿಯು ಅಗತ್ಯವಾಗಿತ್ತಾದ್ದರಿಂದ ವಿಧಾನಮಂಡಳದ ಎರಡೂ ಸದನಗಳಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿಗಯು ಅನುಮೋದನೆಯಾಗಿದೆ. ಸಧ್ಯದಲ್ಲಿಯೇ ಗೌರವಾನ್ವಿತ ರಾಜ್ಯಪಾಲರ ಅಂಕಿತವಾಗುತ್ತದೆ. ನಂತರದಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ತಮ್ಮ ತಮ್ಮ ಸಹಕಾರಿಗಳ ಉಪವಿಧಿಗಳಲ್ಲಿ (ಬೈಲಾಗಳಲ್ಲಿ) ತಿದ್ದುಪಡಿಗಳನ್ನು ಮಾಡುವುದು ಅವಶ್ಯಕವಾಗುತ್ತದೆ.

ಈ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯು ರಾಜ್ಯಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನುಹಮ್ಮಿಕೊಳ್ಳುವುದು ಅವಶ್ಯಕವೆನಿಸಿರುವ ಹಿನ್ನೆಲೆಯಲ್ಲಿ ತರಬೇತಿದಾರರನ್ನು ತರಬೇತಿ ಗೊಳಿಸುವುದು ಅವಶ್ಯಕವಾಗಿದೆ

ಈ ಹಿನ್ನೆಲೆಯಲ್ಲಿ ದಿನಾಂಕ 21, 22 ಜನವರಿ 2013 ಈ ಎರಡು ದಿನಗಳಂದು ಬೆಂಗಳೂರಿನ (ಆರ್.ಐ.ಸಿ.ಎಮ್) ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ ಪದ್ಮನಾಭನಗರ ಬೆಂಗಳೂರಿನಲ್ಲಿ ತರಬೇತಿ ದಾರರ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಸೌಹಾರ್ದ ಪಟ್ಟಣ ಸಹಕಾರ ಬ್ಯಾಂಕುಗಳ ವಿಶೇಷ ತರಬೇತಿ 27,28 ಜನೇವರಿ 2013 :

ರಾಜ್ಯದ ಸೌಹಾರ್ದ ಸಹಕಾರ ಕಾಯ್ದೆಯ ವ್ಯಾಪ್ತಿಯ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು,ಉಪಾಧ್ಯಕ್ಷರು ಹಾಗೂ ಆಡಿಟ್ ಕಮೀಟಿ ಚೇರ್‌ಮನ್ ಗಳಿಗಾಗಿ **"ಆಡಳಿತ ಪರಿಣಿತಿ" (Managerial Excellence) ವಿಶೇಷ ತರಬೇತಿ ಕಾರ್ಯಕ್ರಮವನ್ನು ಇದೇ ದಿನಾಂಕ 27, 28 ಜನವರಿ 2013 ರಂದು ದಿ ರಿವರ್ ಟರ್ನ್ ಲಾಡ್ಜ್ ಭದ್ರ ಪ್ರಾಜೆಕ್ಟ್ ಲಕ್ಕವಳ್ಳಿ, ಚಿಕ್ಕಮಗಳೂರಿನಲ್ಲಿ ಏರ್ಪಡಿಸಿದೆ. ರಾಜ್ಯದ ಎಲ್ಲ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳು ತಪ್ಪದೆ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಕೋರಿದೆ.**

Instructions and guidlines to E-Stamping

All the ACC's and its members are requested to strictly implement the following while operating their E-Stamping counters. You are also requested to give us a letter in writing regarding the implementation of the following:

- Use of original cartridge for printing E-Stamps is mandatory. Please confirm to us regarding the usage of original cartridge in all your branches.

Eg.,Many Acc's are using refilled cartridges instead of original and customers are facing lot of problem due to this. When a xerox is being taken it is showing as original instead of copy on the Xerox and this might be used once again by fraudsters.

- The Acc's has to maintain their imprest balance and keep checking their accounts regularly. In case the ACC maintains negative balance continuously even after sending mails and letters , strict action will be taken on those ACC's and will be closed immediately.
- It is mandatory to use Client requisition format prescribed by Stock Holding Corporation of India Ltd.

Eg., Some of the Societies are using only one side and the instruction part is not being printed on the back side of the Client requisition.

- Display of address and office working hours outside the counter is mandatory. Government has notified working hours between 10:00 am to 4:00 pm. No customer should be denied for service if they visit the counter during these working hours. You may also work as per your co-operative timings ie., between 10am to 6pm etc., and the same has to be mentioned on the notice board for public.
- All the resigned, suspended users/supervisors id's are to be deactivated immediately.

Eg.,In many of the ACC's either the user or supervisor might have resigned from the job or transferred to other branch etc., but their id's are being used by the new employee appointed or some other office staff which is illegal and lead to serious issues.

- For printing E-Stamp certificate use of 80 to 100 GSM bond paper is mandatory. Any deviations in this regard will be viewed seriously.
- Sharing of password amongst the users is strictly prohibited.
- E-Stamp certificate must be issued in the name of individual or a Corporate.

Eg ., The stamp papers issued should have both the first party and second party names in it. Only in affidavit the first party name should be there and and second party will be as "NA" (not applicable)

- No correction on the E-Stamp certificate is allowed.

Once the supervisor accepts the certificate in the system or software no corrections can be made nor cancelled and the amount will be deducted from the imprest balance.

- Systems must be connected through UPS. Usage of direct raw power may lead to problems.
- Eg., In many of the ACC's UPS is not being used or the systems are not connected directly to UPS. When the power goes off the data which is in the process will get deleted and print cannot be taken. The amount will be deducted from the imprest balance which is already entered in the system.You will not be able to retrieve the data once again.
- Required assistance for the illiterate customer may be extended at the counters.
- Receipt for service charges collected needs to be given to clients.

The customers should be given a receipt for the service charge collected from them by the society and an acknowledgement of the stamp paper amount collected.

- Any official from Government may visit your counter for inspection. Full co-operation needs to be extended.
- All the client requisitions need to be stored safely for minimum period of 1 years. These applications may be called for audit.
- Collection of service charges should be strictly as per the Government order. Any deviation to this will be viewed seriously.

The service charges from Rs.10/- to Rs.100/- stamp paper is Rs.10/-, from Rs.101/- to Rs.5,000/- the service charge is Rs.15/- and above Rs.5,000/- no service charges to be collected from the customer's. Bill to be obtained from the ACC for the purchase of the printer cartridge.

- Client requisition has to be given to the clients free of cost.

Eg., Some of the ACC's who were charging for the customer application form was penalized and serious action was taken on them for collecting amount for the Customer application. The application form has to be given free of cost.

- PAN details should be collected if the requisition is more than Rs.50,000/-.
- The Supervisor or the Branch head has to sign along with the Cooperative seal on the stamp paper before issuing it to the customer.

Eg ., Many of the ACC's are issuing stamp paper certificates without the supervisor signature and cooperative society seal. The seal and signature is mandatory and those who failed to do so has been penalized and strict action has been taken on them.

- All the necessary information pertaining to E-Stamping has to be displayed on the Notice Board of the ACC for the public.

  Eg., Service charge details, Article nos., ACC timings, Etc.,
- The User and Supervisor should sign and mention the submission and the certificate no. at the column mentioned for this on the client requisition with the receivers signature and telephone no.

You are once again requested to adhere to the guidelines given. Let us work together to make E-Stamping a big success and serve the citizens of Karnataka proudly.

ಕರ್ನಾಟಕ ಸೌಹಾರ್ದ ಸಹಕಾರಿ 1997 (ತಿದ್ದುಪಡಿ) ವಿಧೇಯಕ 2012 ಪ್ರಮುಖ ಅಂಶಗಳು

– ಶ್ರೀ ನಾರಾಯಣ ಹೆಗಡೆ, ಉಪಪ್ರಧಾನ ವ್ಯವಸ್ಥಾಪಕರು ಕರಾಸೌಸಂಸನಿ. ಬೆಂಗಳೂರು.

ಸಾಮಾನ್ಯ ವಿಷಯಗಳು

1. ಐದು ಅಥವಾ ಹೆಚ್ಚು ಸಹಕಾರಿಗಳು ಸೇರಿ ಒಕ್ಕೂಟ ಸಹಕಾರಿ ರಚನೆಯ ಪ್ರಾವಧಾನವನ್ನು ಬದಲಾಯಿಸಿ, ಇಪ್ಪತ್ತು ಅಥವಾ ಹೆಚ್ಚು ಸಹಕಾರಿಗಳು ಸೇರಿ ಒಕ್ಕೂಟ ಸಹಕಾರಿ ರಚಿಸಬಹುದೆಂದು ಪ್ರಾವಧಾನ ಮಾಡಿದೆ.
2. ಅಪೆಕ್ಸ್ ಸಹಕಾರಿಗಳ ಲೆಕ್ಕಪರಿಶೋಧನಾ ವರದಿಯನ್ನು ವಿಧಾನ ಮಂಡಲದಲ್ಲಿ ಮಂಡಿಸಬೇಕಾಗುತ್ತದೆ. ಗಮನಿಸಿ: 'ಅಪೆಕ್ಸ್ ಸಹಕಾರಿ' ಎಂದರೆ ಸಹಕಾರಿಗಳಿಗೆ ಮಾತ್ರ ಸದಸ್ಯತ್ವಕ್ಕೆ ಪ್ರವೇಶವಿರುವ ಮತ್ತು ಇಡಿ ರಾಜ್ಯದ ಕಾರ್ಯಕ್ಷೇತ್ರವನ್ನುಳ್ಳ ಸಹಕಾರಿ. ಅಂದರೆ ಸಂಯುಕ್ತ ಸಹಕಾರಿ ಮತ್ತು ರಾಜ್ಯ ಮಟ್ಟದ ಕಾರ್ಯವ್ಯಾಪ್ತಿಯುಳ್ಳ ಒಕ್ಕೂಟ ಸಹಕಾರಿಗಳು ಅಪೆಕ್ಸ ಸಹಕಾರಿಗಳಾಗುತ್ತವೆ.
3. ಸಹಕಾರ ಸಂಘಗಳಡಿಯ ಬ್ಯಾಂಕುಗಳು ಸೌಹಾರ್ದ ಕಾಯ್ದೆಗೆ ಪರಿವರ್ತನೆಯಾಗುವ ಪೂರ್ವದಲ್ಲಿ ರಿಸರ್ವ್ ಬ್ಯಾಂಕಿನ ಅನುಮತಿ ಬೇಕೆಂಬ ಪ್ರಾವಧಾನವನ್ನು ತೆಗೆದು ಹಾಕಲಾಗಿದೆ.
4. ನಿವ್ವಳ ಲಾಭ ವಿಲೆವಾರಿಯನ್ನು ಶೇ.63 ರಿಂದ ಶೇ.52 ಕ್ಕೆ ಇಳಿಸಲಾಗಿದೆ. ಶಿಕ್ಷಣ ನಿಧಿಯನ್ನು ಶೇ.3ರಿಂದ ಶೇ. 2ಕ್ಕೆ ಇಳಿಸಲಾಗಿದೆ. ಮತ್ತು ಶಿಕ್ಷಣ ನಿಧಿಯ ಪೂರ್ಣ ಮೊತ್ತವನ್ನು ಸಾಮಾನ್ಯ ಸಭೆಯ ದಿನಾಂಕದಿಂದ ಒಂದು ತಿಂಗಳೊಳಗೆ ಸಂಯುಕ್ತ ಸಹಕಾರಿಗೆ ಪಾವತಿಸುವಂತೆ ಪ್ರಾವಧಾನ ಮಾಡಲಾಗಿದೆ. ಮತ್ತು ಶಿಕ್ಷಣ ನಿಧಿ ಮೊತ್ತವನ್ನು ಪಾವತಿ ಮಾಡುವ ಪೂರ್ವದಲ್ಲಿ ಸದಸ್ಯರಿಗೆ ಲಾಭಾಂಶ ಹಂಚುವುದನ್ನು ನಿಷೇಧಿಸಲಾಗಿದೆ.

5. ವೇತನದಾರರಿಗೆ ಸಾಲ ನೀಡುವ ಸಂದರ್ಭದಲ್ಲಿ ವೇತನದಿಂದ ಕಡಿತ ಮಾಡುವ ಪ್ರಾವಧಾನವನ್ನು ಹೊಸದಾಗಿ ಸೇರಿಸಿದೆ.
6. ಯಾವುದೇ ಸಹಕಾರಿಯು ನೋಂದಾಯಿತ ಕಛೇರಿಯನ್ನು ಹೊರತುಪಡಿಸಿ ಯಾವುದೇ ಶಾಖೆಯನ್ನು (ಕಾಯ್ದೆಯಲ್ಲಿ ಶಾಖೆ, ಉಪಶಾಖೆ, ಸೇವಾಕೇಂದ್ರ ಇತ್ಯಾದಿ ಯಾವುದೇ ಹೆಸರಿನಿಂದ ಕರೆಯಲಾಗುವ ಕಛೇರಿಗಳನ್ನೂ ಶಾಖೆ ಎಂದೇ ಪರಿಗಣಿಸಲಾಗಿದೆ.) ಸಂಯುಕ್ತ ಸಹಕಾರಿ ಮತ್ತು ಸಾಮಾನ್ಯ ಸಭೆಯ ಪೂರ್ವಾನುಮತಿ ಪಡೆದು ಮಾತ್ರ ತೆರೆಯಬಹುದು.
7. ನೌಕರನ ವಿರುದ್ದದ ಶಿಸ್ತು ಕ್ರಮಕ್ಕೆ ಸಂಬಂಧಿಸಿದ ವ್ಯಾಜ್ಯ ಹೂಡಲು ಒಂದು ವರ್ಷದ ಮಿತಿ ನಿಗದಿಪಡಿಸಿದೆ.
8. ನಿಬಂಧಕರ ನ್ಯಾಯಾಲಯದಲ್ಲಿ ವ್ಯಾಜ್ಯ ಹೂಡುವ ಸಂದರ್ಭದಲ್ಲಿ ವಕೀಲರ ಸೇವೆ ಪಡೆಯಲು ನಿಬಂಧಕರ ಅನುಮತಿ ಪಡೆಯಬೇಕೆಂಬ ಪ್ರಾವಧಾನವನ್ನು ತೆಗೆದುಹಾಕಲಾಗಿದೆ.
9. ಅಪರಾಧ ಮತ್ತು ದಂಡಗಳ ವ್ಯಾಪ್ತಿಗೆ ಇನ್ನಷ್ಟು ವಿಷಯಗಳನ್ನು ತರಲಾಗಿದೆ. ಅವೆಂದರೆ, ವೇತನ ಕಡಿತಕ್ಕೆ ಸಂಬಂಧಿಸಿದ ವಿಷಯಗಳು, ಸಹಕಾರಿಯ ದಾಖಲೆಗಳು, ನಗದು ಇತ್ಯಾದಿಯನ್ನು ಕಾಯ್ದೆಯಡಿ ಅಧಿಕಾರ ಪಡೆದ ವ್ಯಕ್ತಿಗೆ ಹಸ್ತಾಂತರಿಸದಿದ್ದಲ್ಲಿ, ನಿಗದಿತ ಸಮಯದಲ್ಲಿ ಲೆಕ್ಕಪರಿಶೋದನೆ, ಸಾಮಾನ್ಯ ಸಭೆ ನಡೆಸದಿದ್ದಲ್ಲಿ, ನಿಬಂಧಕರಿಗೆ ಅಥವಾ ಸಂಯುಕ್ತ ಸಹಕಾರಿಗೆ ಮಾಹಿತಿ ಮತ್ತು ವರದಿಗಳನ್ನು ಸಲ್ಲಿಸದಿದ್ದಲ್ಲಿ, ಚುನಾವಣೆ ಅಗತ್ಯ ನೆರವು ನೀಡದಿದ್ದಲ್ಲಿ ಅಥವಾ ಚುನಾವಣೆಯಲ್ಲಿ ಭ್ರಷ್ಟಾಚಾರದಲ್ಲಿ ತೊಡಗಿದಲ್ಲಿ ಅಪರಾಧವೆಂದು ಪರಿಗಣಿಸಲಾಗಿದೆ.

ಸದಸ್ಯರಿಗೆ ಸಂಬಂಧಿಸಿದ ವಿಷಯಗಳು

10. ಸಹಸದಸ್ಯತ್ವವನ್ನು ತೆಗೆದು ಹಾಕಲಾಗಿದೆ. ನಾಮಮಾತ್ರ ಸದಸ್ಯತ್ವವನ್ನು ಉಳಿಸಿಕೊಂಡಿದ್ದು, ನಿರ್ದಿಷ್ಟ ಉದ್ದೇಶಕ್ಕಾಗಿ, ಮೂರು ವರ್ಷಗಳಿಗೆ ಮೀರದ ಅವಧಿಗಾಗಿ ನಾಮಮಾತ್ರ ಸದಸ್ಯರೆಂದು ಸೇರಿಸಿಕೊಳ್ಳಬಹುದು. ಆದರೆ ಸದಸ್ಯತ್ವಕ್ಕೆ ಅರ್ಹನಿದ್ದ ವ್ಯಕ್ತಿಯನ್ನು ನಾಮಮಾತ್ರ ಸದಸ್ಯರೆಂದು ಸೇರಿಸಿಕೊಳ್ಳುವಂತಿಲ್ಲ.
11. ಸದಸ್ಯತ್ವಕ್ಕೆ ಅರ್ಹನಿದ್ದ ವ್ಯಕ್ತಿಗೆ ಸದಸ್ಯತ್ವವನ್ನು ನಿರಾಕರಿಸುವಂತಿಲ್ಲ. ಮತ್ತು ಸದಸ್ಯತ್ವದ ಅರ್ಜಿ ಸ್ವೀಕರಿಸಿದ 60 ದಿನಗಳೊಳಗೆ ಅರ್ಜಿದಾರನಿಗೆ ಸದಸ್ಯತ್ವ ನಿರಾಕರಿಸಿದಲ್ಲಿ, ಕಾರಣ ಸಹಿತ ನಿರಾಕರಣೆಯನ್ನು ತಿಳಿಸತಕ್ಕದ್ದು.
12. ಸದಸ್ಯತ್ವದಿಂದ ತೆಗೆದು ಹಾಕುವ ಪ್ರಾವಧಾನವನ್ನು ಕೈಬಿಟ್ಟಿದ್ದು, ಯಾವುದೇ ಸದಸ್ಯನನ್ನು ತೆಗೆದು ಹಾಕುಂತಿಲ್ಲ. ಆದರೆ ಸದಸ್ಯನು ತನ್ನ ಕರ್ತವ್ಯವನ್ನು ಪೂರೈಸದಿದ್ದಲ್ಲಿ, ಕಾಯ್ದೆ ಅಥವಾ ಉಪವಿಧಿಯ ಯಾವುದೇ ಅನರ್ಹತೆಗೆ ಗುರಿಯಾದಲ್ಲಿ, ಅವನನ್ನು ಅನರ್ಹಗೊಳಿಸಬಹುದು.
13. ಸದಸ್ಯರಿಗೆ ಅವನಿಗೆ ಸಂಬಂಧಪಟ್ಟ ಯಾವುದೇ ದಾಖಲೆಗಳನ್ನು ಕಛೇರಿ ವೇಳೆಯಲ್ಲಿ ನೋಡಲು ಮತ್ತು ನಿಗದಿತ ಶುಲ್ಕ ಸಂದಾಯ

ಮಾಡಿದ ತರುವಾಯ ಪಡೆಯಲು ಅವಕಾಶ ಮಾಡಲಾಗಿದೆ.

ಆಡಳಿತ ಮಂಡಲಿಗೆ ಸಂಬಂಧಿಸಿದ ವಿಷಯಗಳು

14. ಆಡಳಿತ ಮಂಡಲಿ ಸದಸ್ಯರ ಕನಿಷ್ಠ ಮಿತಿಯನ್ನು ಒಂಬತ್ತರಿಂದ ಹನ್ನೊಂದಕ್ಕೆ ಹೆಚ್ಚಿಸಲಾಗಿದೆ. ಮತ್ತು ಗರಿಷ್ಠ ಮಿತಿಯನ್ನು ಹದಿನೈದರ ಬದಲಾಗಿ ಕಾರ್ಯಕ್ಷೇತ್ರಕ್ಕೆ ಅನುಗುಣವಾಗಿ ಈ ಕೆಳಗಿನಂತೆ ನಿಗದಿಪಡಿಸಿದೆ.

ತಾಲೂಕು ಮಟ್ಟಕ್ಕಿಂತ ಕೆಳಗಿನ ಎಲ್ಲ ಸಹಕಾರಿಗಳು – ಹನ್ನೊಂದು, ತಾಲ್ಲೂಕು ಮಟ್ಟದ ಎಲ್ಲ ಸಹಕಾರಿಗಳು – ಹದಿಮೂರು, ತಾಲ್ಲೂಕು ವ್ಯಾಪ್ತಿ ಮೀರಿದ ಆದರೆ ಜಿಲ್ಲಾ ಮಟ್ಟ ಮೀರದ ಸಹಕಾರಿಗಳು – ಹದಿನೈದು, ತಾಲ್ಲೂಕು ವ್ಯಾಪ್ತಿ ಮೀರಿದ ಆದರೆ ಜಿಲ್ಲಾ ಮಟ್ಟ ಮೀರದ ಸಹಕಾರಿ ಬ್ಯಾಂಕುಗಳು – ಹದಿನೇಳು, ಜಿಲ್ಲಾ ವ್ಯಾಪ್ತಿ ಮೀರಿದ ಎಲ್ಲ ಸಹಕಾರಿಗಳು – ಹದಿನೇಳು, ಒಕ್ಕೂಟ ಸಹಕಾರಿಗಳು – ಹತ್ತೊಂಬತ್ತು, ಅಪೆಕ್ಸ್ ಸಹಕಾರಿಗಳು – ಇಪ್ಪತ್ತೊಂದು.

15. ಆಡಳಿತ ಮಂಡಲಿಯಲ್ಲಿ ಮಿಸಲಾತಿ ನಿಗದಿಪಡಿಸಿದ್ದು, ಪರಿಶಿಷ್ಟ ಜಾತಿ ಅಥವಾ ಪಂಗಡಕ್ಕೆ ಒಂದು ಸ್ಥಾನ, ಹಿಂದುಳಿದ ವರ್ಗದವರಿಗೆ ಎರಡು ಸ್ಥಾನ ಮತ್ತು ಮಹಿಳೆಯರಿಗೆ ಎರಡು ಸ್ಥಾನವನ್ನು ಮೀಸಲಿಡಲಾಗಿದೆ. ಚುನವಣೆಯ ಸಂದರ್ಭದಲ್ಲಿ ಆ ವರ್ಗದ ಸದಸ್ಯರಿದ್ದಲ್ಲಿ ಮೇಲಿನ ಮೀಸಲಾತಿ ಅನ್ವಯಿಸುತ್ತದೆ. ಬಿಡಿ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಹೊಂದಿರುವ ಸಹಕಾರಿಗಳಿಗೆ ಮಾತ್ರ ಮೀಸಲಾತಿ ಅನ್ವಯಿಸುತ್ತದೆ.

16. ಆಡಳಿತ ಮಂಡಲಿಗೆ ಬ್ಯಾಂಕಿಂಗ್, ವ್ಯವಸ್ಥಾಪನೆ ಅಥವಾ ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಇಬ್ಬರು ತಜ್ಞರನ್ನು ಸದಸ್ಯರನ್ನಾಗಿ ಸಹ ಆಯ್ಕೆ ಮೂಲಕ ಸೇರಿಸಿಕೊಳ್ಳಬೇಕು. ಆದರೆ ಅಂತಹ ಸದಸ್ಯರಿಗೆ ಚುನಾವಣೆಯಲ್ಲಿ ಮತದಾನದ ಅಥವಾ ಪದಾಧಿಕಾರಿಯಾಗುವ ಹಕ್ಕು ಇರುವುದಿಲ್ಲ.

17. ಆಡಳಿತ ಮಂಡಲಿಯ ಅವಧಿ ಚುನಾವಣೆಯ ದಿನಾಂಕದಿಂದ ಐದು ವರ್ಷಗಳಾಗಲಿದೆ. ಇದುವರೆಗಿನ ಸಹಕಾರ ವರ್ಷದ ಮಧ್ಯಭಾಗದಲ್ಲಿ ಚುನಾವಣೆ ನಡೆದರೆ ಉಳಿದ ಅವಧಿಯನ್ನು ಒಂದು ಪೂರ್ಣವರ್ಷವೆಂದು ಪರಿಗಣಿಸುವುದು ಕೈಬಿಡಲಾಗಿದೆ.

18. ಪದಾಧಿಕಾರಿಗಳ ಅವಧಿ ಕೂಡಾ ಇನ್ನು ಮುಂದೆ ಎರಡೂವರೆ ವರ್ಷಗಳ ಬದಲು ಐದು ವರ್ಷಗಳಾಗಲಿದೆ.

19. ಆಡಳಿತ ಮಂಡಲಿ ಸದಸ್ಯರಿಗೆ ನೀಡುವ ಯಾವುದೇ ರೂಪದ ಭತ್ಯೆಗಳನ್ನು ಉಪವಿಧಿಯಲ್ಲಿ ನಮೂದಿಸಿರಬೇಕು. ಇದುವರೆಗೆ ಕೇವಲ ಸಾಮಾನ್ಯ ಸಭೆಯ ಅನುಮತಿ ಪಡೆದು ಭತ್ಯೆಗಳನ್ನು ನೀಡಲಾಗುತ್ತಿತ್ತು.

20. ನಿರ್ದೇಶಕರಿಗೆ ಹೆಚ್ಚುವರಿ ಅನರ್ಹತೆಗಳನ್ನು ನಿಗದಿಪಡಿಸಿದೆ. ಅವೆಂದರೆ ಚುನಾವಣೆ ನಡೆಸಲು ಅಗತ್ಯ ನೆರವು ನೀಡದಿದ್ದಲ್ಲಿ, ಸಂಯುಕ್ತ ಸಹಕಾರಿ ಮತ್ತು ನಿಬಂಧಕರಿಗೆ ಕಲಂ 34ರಡಿ ಮಾಹಿತಿ ಸಲ್ಲಿಸದಿದ್ದಲ್ಲಿ ಅಥವಾ ಆರ್ಥಿಕ ಅವ್ಯವಹಾರದಲ್ಲಿ ಭಾಗಿಯಾದಲ್ಲಿ ಅನರ್ಹರಾಗುತ್ತಾರೆ. ಮತ್ತು ಈ ಅನರ್ಹತೆಗಳ ಜೊತೆಗೆ ಕಾಯ್ದೆಯಲ್ಲಿ ಹೇಳಿರುವ ಯವುದೇ ಅನರ್ಹತೆಗೆ ಗುರಿಯಾದ ನಿರ್ದೇಶಕರು ಐದು ವರ್ಷಗಳವರೆಗೆ ಅಂತಹ ಸಹಕಾರಿಯ ನಿರ್ದೇಶಕರಾಗಿ ಆಯ್ಕೆಯಾಗಲು ಅಥವಾ ಮುಂದುವರೆಯಲು ಅನರ್ಹರಾಗುತ್ತಾರೆ.

> **ಆಡಳಿತ ಮಂಡಲಿಯ ಅವಧಿ ಚುನಾವಣೆಯ ದಿನಾಂಕದಿಂದ ಐದು ವರ್ಷಗಳಾಗಲಿದೆ. ಇದುವರೆಗಿನ ಸಹಕಾರ ವರ್ಷದ ಮಧ್ಯಭಾಗದಲ್ಲಿ ಚುನಾವಣೆ ನಡೆದರೆ ಉಳಿದ ಅವಧಿಯನ್ನು ಒಂದು ಪೂರ್ಣವರ್ಷವೆಂದು ಪರಿಗಣಿಸುವುದು ಕೈಬಿಡಲಾಗಿದೆ.**

21. ಆಡಳಿತ ಮಂಡಲಿಯಲ್ಲಿ ಆಕಸ್ಮಿಕ ರಿಕ್ತತೆ ಉಂಟಾದಲ್ಲಿ, ಮೊದಲ ಎರಡೂವರೆ ವರ್ಷಗಳವರೆಗೆ ರಿಕ್ತತೆಯನ್ನು ಚುನಾವಣೆಯ ಮೂಲಕ ತುಂಬಬೇಕು. ಮಂಡಲಿಯ ಅವಧಿಯು ಎರಡೂವರೆ ವರ್ಷಗಳಿಗಿಂತ ಕಡಿಮೆ ಇದ್ದಲ್ಲಿ ಮತ್ತು ಕೋರಂಗೆ ಅಗತ್ಯ ಸಂಖ್ಯೆ ಇದ್ದಲ್ಲಿ ಸಹ ಆಯ್ಕೆ ಮೂಲಕ ತುಂಬಬಹುದು.

22. ಮುಖ್ಯಕಾರ್ಯನಿರ್ವಾಹಕನು ಆಡಳಿತ ಮಂಡಲಿಯ ಪದನಿಮಿತ್ತ ನಿರ್ದೇಶಕನಾಗಿರುತ್ತಾನೆ. ಅದರೆ ಪದಾಧಿಕಾರಿಗಳ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿರುವುದಿಲ್ಲ.

23. ಮಂಡಲಿಯಲ್ಲಿ ರಿಕ್ತತೆ ಉಂಟಾದಲ್ಲಿ ಚುನಾವಣೆ ನಡೆಸಲು ಚುನಾವಣಾ ಆಯೋಗಕ್ಕೆ ತಿಳಿಸುವುದು ಮುಖ್ಯಕಾರ್ಯನಿವಾಹಕನ ಜವಾಬ್ದಾರಿ.

24. ಯಾವುದೇ ಹಂತದಲ್ಲಿ ಮರಣ ರಾಜಿನಾಮೆ ಅನರ್ಹತೆ ಇತ್ಯಾದಿ ಯಾವುದೇ ಕಾರಣದಿಂದ ಮಂಡಲಿಯಲ್ಲಿ ಕೋರಂ ಇಲ್ಲದಿದ್ದಲ್ಲಿ, ಸಂಯುಕ್ತ ಸಹಕಾರಿಯು ಅಂತಹ ಸಹಕಾರಿಗೆ ಚುನಾವಣೆ ಮುಗಿದು ಕೋರಂ ಆಗುವವರೆಗೆ, ಆದರೆ ಆರು ತಿಂಗಳ ಮೀರದ ಅವಧಿಗೆ ವಿಶೇಷಾಧಿಕಾರಿಯನ್ನು ನೇಮಕ ಮಾಡುವುದು. ವಿಶೇಷಾಧಿಕಾರಿಯು ಮಂಡಲಿಯ ಎಲ್ಲಾ ಅಧಿಕಾರಗಳನ್ನೂ ಹೊಂದಿರುತ್ತಾನೆ.

25. ಇದುವರೆಗೆ ಕಲಂ 34ರಲ್ಲಿ ನಿಬಂಧಕರಿಗೆ ಅಕ್ಟೋಬರ್ 31ರೊಳಗೆ ನೀಡುತ್ತಿದ್ದ ಮಾಹಿತಿ ಮತ್ತು ವರದಿಗಳನ್ನುಇನ್ನು ಮುಂದೆ ನಿಬಂಧಕರಿಗೆ ಮತ್ತು ಸಂಯುಕ್ತ ಸಹಕಾರಿಗೆ ಸೆಪ್ಟಂಬರ್ 30ರೊಳಗೆ ಸಲ್ಲಿಸತಕ್ಕದ್ದು. ಮಾಹಿತಿ ಸಲ್ಲಿಸದಿದ್ದಲ್ಲಿ ಸಹಕಾರಿಯ ನಿರ್ದೇಶಕರು ಅನರ್ಹತೆಗೆ ಗುರಿಯಾಗುತ್ತಾರೆ.

ಚುನಾವಣೆ ಸಂಬಂಧಿತ ವಿಷಯಗಳು

26. ಇದುವರೆಗೆ ಸಹಕಾರಿಯ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನಿಬಂಧಕರು ನೇಮಕ ಮಾಡುತ್ತಿದ್ದರು. ಪ್ರಸ್ತುತ ಸಹಕಾರಿ ಚುನಾವಣಾ ಆಯೋಗ ರಚಿಸಲಾಗುತ್ತಿದ್ದು, ಪದಾಧಿಕಾರಿಗಳ ಚುನಾವಣೆಯೂ ಸೇರಿದಂತೆ ಸಹಕಾರಿಯ ಎಲ್ಲಾ ರೀತಿಯ ಚುನಾವಣೆಯನ್ನು ನಡೆಸುವ ಸಂಪೂರ್ಣ ಉಸ್ತುವಾರಿ (ಮತದಾರರ ಪಟ್ಟಿ ತಯಾರಿಸುವುದೂ ಸೇರಿದಂತೆ) ಯನ್ನು ಚುನಾವಣಾ ಆಯೋಗಕ್ಕೆ ನೀಡಿದೆ.
27. ಮುಖ್ಯಮಂತ್ರಿಯವರ ಶಿಫಾರಸ್ಸಿನ ಮೇರೆಗೆ ಮಾನ್ಯ ರಾಜ್ಯಪಾಲರು ಪ್ರಧಾನ ಕಾರ್ಯದರ್ಶಿ ದರ್ಜೆಯ ಅಧಿಕಾರಿಯನ್ನು ಚುನಾವಣಾ ಆಯೋಗಕ್ಕೆ ಚುನಾವಣಾ ಆಯುಕ್ತರನ್ನಾಗಿ ನೇಮಕ ಮಾಡುತ್ತಾರೆ. ಮತ್ತು ಸಹಕಾರಿಗಳ ಅಪರ ನಿಬಂಧಕರ ದರ್ಜೆಯ ಅಧಿಕಾರಿಯು ಆಯೋಗದ ಕಾರ್ಯದರ್ಶಿಯಾಗುತ್ತಾರೆ. ಚುನಾವಣಾ ಆಯುಕ್ತರ ಪದಾವಧಿಯು ಐದು ವರ್ಷಗಳಾಗಿರುತ್ತದೆ.
28. ಕಾಯ್ದೆ ತಿದ್ದುಪಡಿಯ ನಂತರ ಚುನಾವಣಾ ಆಯೋಗದ ರಚನೆಯಾಗಿ ಚಟುವಟಿಕೆ ಆರಂಭಿಸಲು ಕಾಲಾವಕಾಶ ಅಗತ್ಯವಿರುವ ಕಾರಣ, 2013ರ ಮಾರ್ಚ್ ತಿಂಗಳಿನಲ್ಲಿ ನಡೆಯಬೇಕಿರುವ ಚುನಾವಣೆಗಳನ್ನು ಮುಂದೂಡಿದೆ. ಪ್ರಾಥಮಿಕ ಸಹಕಾರಿಗಳ ಚುನಾವಣೆಗಳನ್ನು 30.09.2013 ರೊಳಗೆ, ಮಾಧ್ಯಮಿಕ ಸಹಕಾರಿಗಳ ಚುನಾವಣೆಗಳನ್ನು 31.10.2013 ರೊಳಗೆ ಒಕ್ಕೂಟ ಸಹಕಾರಿಯ ಚುನಾವಣೆಗಳನ್ನು 30.11.2013ರೊಳಗೆ ನಡೆಸಬೇಕಿರುತ್ತದೆ. ಚುನಾವಣೆಯವರೆಗೆ ಈಗಿರುವ ಆಡಳಿತ ಮಂಡಳಿಯೇ ಮುಂದುವರೆಯುವಂತೆ ಪ್ರಾವಧಾನ ಮಾಡಿದೆ.
29. ಚುನಾವಣೆಗೆ ಸಂಬಂಧಿಸಿದ ವಿವಾದವನ್ನು ನಿಬಂಧಕರ ಬದಲು ಸಿವಿಲ್ ನ್ಯಾಯಾಲಯದ ವ್ಯಾಪ್ತಿಗೆ ತರಲಾಗಿದೆ.

ಲೆಕ್ಕಪರಿಶೋಧನೆಗೆ ಸಂಬಂಧಿಸಿದ ವಿಷಯಗಳು

30. ಲೆಕ್ಕಪರಿಶೋಧಕರ ಪಟ್ಟಿ ತಯಾರಿಸುವ ಜವಾಬ್ದಾರಿಯನ್ನು ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ನೀಡಲಾಗಿದೆ. ಇದುವರೆಗೆ ಈ ಜವಾಬ್ದಾರಿಯನ್ನು ಸಂಯುಕ್ತ ಸಹಕಾರಿ ನಿರ್ವಹಿಸುತ್ತಿತ್ತು.
31. ಲೆಕ್ಕಪರಿಶೋಧನಾ ನಿರ್ದೇಶಕನು ಪ್ರತಿ ವರ್ಷ ಏಪ್ರಿಲ್ 30ರೊಳಗೆ ಪ್ರತಿ ಸಹಕಾರಿಗೆ ಗರಿಷ್ಠ 10ಕ್ಕೆ ಲೆಕ್ಕಪರಿಶೋಧಕರ ಪಟ್ಟಿಯನ್ನು ಕಳುಹಿಸುವರು. ಆ ಪಟ್ಟಿಯಿಂದ ಒಬ್ಬರನ್ನು ಸಾಮಾನ್ಯ ಸಭೆಯು ನೇಮಕ ಮಾಡಬೇಕು ಮತ್ತು ಲೆಕ್ಕಪರಿಶೋಧಕರ ಶುಲ್ಕವನ್ನು ಸಾಮಾನ್ಯ ಸಭೆಯು ನಿರ್ಧರಿಸಬೇಕು.
32. ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ ಅಧಿಕಾರಿಗಳನ್ನು ಮತ್ತು ಸನ್ನದು ಲೆಕ್ಕಪರಿಶೋಧಕರನ್ನು ಮತ್ತು ಸನ್ನದು ಲೆಕ್ಕಪರಿಶೋಧಕರ ಸಂಸ್ಥೆಗಳನ್ನು 'ಲೆಕ್ಕಪರಿಶೋಧಕರು' ಎಂದು ಕಾಯ್ದೆಯು ಪರಿಗಣಿಸಿದೆ.
33. ಲೆಕ್ಕಪರಿಶೋಧನೆಯನ್ನು ಪ್ರತಿವರ್ಷ ಸೆಪ್ಟೆಂಬರ್ ಒಂದನೇ ದಿನಾಂಕದೊಳಗೆ ಮುಕ್ತಾಯಗೊಳಿಸತಕ್ಕದ್ದು. ಮತ್ತು ವರದಿಯನ್ನು ಲೆಕ್ಕಪರಿಶೋಧನಾ ನಿರ್ದೇಶಕನಿಗೆ ನಿಬಂಧಕರಿಗೆ ಮತ್ತು ಸಂಯುಕ್ತ ಸಹಕಾರಿಗೆ ಕಳುಹಿಸತಕ್ಕದ್ದು. ಅಲ್ಲದೇ ಸಹಕಾರಿಯು ಯಾವುದಾದರೂ ಸಂಸ್ಥೆಯಿಂದ ಸಾಲ ಪಡೆದಿದ್ದಲ್ಲಿ ಅಂತಹ ಸಂಸ್ಥೆಗೆ ಕೂಡಾ ನೀಡಬೇಕು.
34. ಸಾಮಾನ್ಯ ಸಭೆಯ ದಿನಾಂಕದಿಂದ ಮುವತ್ತು ದಿನಗಳೊಳಗೆ ಲೆಕ್ಕಪರಿಶೋಧನಾ ವರದಿಯಲ್ಲಿ ಹೇಳಿದ ನ್ಯೂನತೆಗಳ ಕುರಿತು ತೆಗೆದುಕೊಂಡ ಕ್ರಮಗಳನ್ನು ನಿಬಂಧಕರಿಗೆ ಮತ್ತು ಸಂಯುಕ್ತ ಸಹಕಾರಿಗೆ ಕಳುಹಿಸಬೇಕು.
35. ಲೆಕ್ಕಪರಿಶೋಧನಾ ವರದಿಯು ಸಮರ್ಪಕವಾಗಿಲ್ಲವೆಂದು ನಿರ್ಣಯಿಸಿ ಮರುಲೆಕ್ಕಪರಿಶೋಧನೆಗೆ ನಿರ್ಣಯಿಸುವ ಅಧಿಕಾರವನ್ನು ಸಾಮಾನ್ಯ ಸಭೆಗೆ ನೀಡಿದೆ. ಮತ್ತು ರಾಜ್ಯ ಸರ್ಕಾರವು ಕೂಡ ಮರುಲೆಕ್ಕಪರಿಶೋಧನೆಗೆ ಆದೇಶಿಸಬಹುದು.
36. ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ ಹಿಂದಿನ ವರ್ಷದ ಹಿಂದಿನ ವರ್ಷದ ಲೆಕ್ಕಪತ್ರಗಳನ್ನು ತಯಾರಿಸಿ ಆಡಳಿತ ಮಂಡಲಿ ಅನುಮೋದನೆ ಪಡೆದು ಲೆಕ್ಕಪರಿಶೋಧಕನಿಗೆ ನೀಡುವುದು ಮುಖ್ಯಕಾರ್ಯನಿವಾಹಕನ ಜವಾಬ್ದಾರಿ.

ಸಾಮಾನ್ಯ ಸಭೆಗೆ ಸಂಬಂಧಿಸಿದ ವಿಷಯಗಳು

37. ಸಾಮಾನ್ಯ ಸಭೆಗೆ ಹೆಚ್ಚುವರಿ ಅಧಿಕಾರಗಳನ್ನು ನೀಡಲಾಗಿದೆ. ಅವುಗಳೆಂದರೆ, ಆಂತರಿಕ ಲೆಕ್ಕಪರಿಶೋಧಕರ ನೇಮಕ, ನಿರ್ದೇಶಕರ ಮತ್ತು ಸಂಬಂಧಿಗಳ ಸಾಲಗಳ ಕುರಿತು, ಸಾಲ ಸುಸ್ತಿಯಾಗಿದ್ದಲ್ಲಿ ಅವುಗಳ ಕುರಿತು, ಸೇವೆಯಿಂದ ತೆಗೆದು ಹಾಕಿದ ನೌಕರನ ಅಪೀಲಿನ ಪರಿಗಣನೆ ಇತ್ಯಾದಿ.
38. ಯಾವುದೇ ಸಹಕಾರಿಯ ಸದಸ್ಯರ ಸಂಖ್ಯೆಯು 3000 ಮೀರಿದ್ದಲ್ಲಿ ಅಥವಾ ಕಾರ್ಯಕ್ಷೇತ್ರವು ಒಂದು ತಾಲೂಕಿಗಿಂತ ಹೆಚ್ಚಿದ್ದಲ್ಲಿ ಪ್ರಾತಿನಿಧಿಕ ಸಾಮಾನ್ಯ ನಿಕಾಯ ರಚಿಸಿಕೊಳ್ಳಲು ಅವಕಾಶ ಮಾಡಿದೆ. ಪ್ರಾತಿನಿಧಿಕ ಸಾಮಾನ್ಯ ನಿಕಾಯಕ್ಕೆ ಸಾಮಾನ್ಯ ನಿಕಾಯದ ಕೆಲವು ಅಥವಾ ಎಲ್ಲಾ ಅಧಿಕಾರಗಳನ್ನು ನೀಡಬಹುದಾಗಿದೆ.
39. ಇದುವರೆಗೆ ಸಭೆಗೆ ಅಗತ್ಯ ಕೋರಂ ಅನ್ನು ಉಪವಿಧಿಯಲ್ಲಿ ನಿಗದಿಪಡಿಸಲಾಗುತ್ತಿತ್ತು. ಪ್ರಸ್ತುತ ಕಾಯ್ದೆಯಲ್ಲಿ ಸಾಮಾನ್ಯ ಸಭೆಗೆ ಶೇ.20, ಪ್ರಾತಿನಿಧಿಕ ಸಾಮಾನ್ಯ ಸಭೆಗೆ ಶೇ.60 ಮತ್ತು ಆಡಳಿತ ಮಂಡಲಿ ಸಭೆಗೆ ಶೇ. 50ಕ್ಕಿಂತ ಹೆಚ್ಚು ಎಂದು ಕಾಯ್ದೆಯಲ್ಲಿ ನಿಗದಿಪಡಿಸಿದೆ.
40. ಪ್ರತಿವರ್ಷ ಸಾಮಾನ್ಯ ಸಭೆಯನ್ನು ಸೆಪ್ಟೆಂಬರ್ 30ರ ಬದಲು ಸೆಪ್ಟೆಂಬರ್ 25ರೊಳಗೆ ನಡೆಸಬೇಕಿರುತ್ತದೆ. ■

ಉತ್ತಮ ಹಾಗೂ ಮಾದರಿ ತರಬೇತಿ ಕಾರ್ಯಕ್ರಮ :

ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಏರ್ಪಡಿಸಿದ್ದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮವು ಯಶಸ್ವಿಯಾಗಿ ನಡೆದು ದಿನಾಂಕ 10/12/2012 ರಂದು ಮುಕ್ತಾಯವಾಯಿತು.

ಕಾರ್ಯಕ್ರಮದ ಸಮಾರೋಪ ಭಾಷಣ ಮಾಡಿದ ದಕ್ಷಿಣ ಕನ್ನಡ ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟದ ಅಧ್ಯಕ್ಷ ಶ್ರೀರವಿರಾಜ ಹೆಗಡೆಯವರು ಮಾತನಾಡಿ ಸಂಯುಕ್ತ ಸಹಕಾರಿಯು ಏರ್ಪಡಿಸಿರುವ ಈ ತರಬೇತಿ ಕಾರ್ಯಕ್ರಮದ ಎಲ್ಲ ವಿವರಗಳನ್ನು, ಶಿಬಿರಾರ್ಥಿಗಳ ಅಭಿಪ್ರಾಯಗಳನ್ನು

ತರಬೇತಿಯು ಅತ್ಯುತ್ತಮವಾಗಿತ್ತು. **– ಆಶಾ.ಸಿ.**

ಒಬ್ಬ ಸಮರ್ಥ ಅಧಿಕಾರಿಯಾಗಲೂ ಇಂತಹ ತರಬೇತಿ ಅತ್ಯವಶ್ಯಕ **– ಬಿ.ಗುಣಪಾಲ್ ಶೆಟ್ಟಿ.**

ಈ ತರಬೇತಿಯು ಚಿನ್ನದಂತೆ ಹೊಳಪು ವಜ್ರದಂತೆ ಗಟ್ಟಿಯಾಗಿದೆ. **– ಗೋಪಾಲಕೃಷ್ಣ ಪ್ರಭು.**

ಒಂದು ಉತ್ತಮ ತರಬೇತಿ **– ವಿಪುಲರಾಜ ಬಾ,ವತಾರೆ**

ತರಬೇತಿಯೊಂದು ಮಾದರಿಯಾಗಿದೆ. **– ಸಂಜಯ ಜಂಬು ನರವಾಡೆ.**

ಈ ತರಬೇತಿಯು ನಮ್ಮ ಜೀವನದ ಬಹು ಮುಖ್ಯವಾದದ್ದು **– ರುದ್ರೇಶ್ ಟಿ.ಕೆ.**

ಈ ತರಬೇತಿಯು ಜಿಲ್ಲಾವಾರು ಇರಬೇಕಿತ್ತು. ಹಾಗೂ ಈಗಿನ ಯುವಪೀಳಿಗೆಯನ್ನು ರಾಜಕೀಯದ ಗೀಳಿಂದ ಹೊರತಂದು ಸಹಕಾರ ಕ್ಷೇತ್ರಕ್ಕೆ ಸೆಳೆಯುಂತಹ ತರಬೇತಿಯಾಗಿದೆ. **– ಸತೀಶ್ ಕುಮಾರ್ ಹೆಚ್.ಎಸ್.**

ಸೌಹಾರ್ದ ಸಹಕಾರಿಯಲ್ಲಿ ದುಡಿಯುವ ಪ್ರತಿಯೊಬ್ಬ ನೌಕರನು ಹಾಗೂ ಆಡಳಿತ ಮಂಡಳಿಯ ಸದಸ್ಯರು ಕಡ್ಡಾಯವಾಗಿ ಇಂತಹ ತರಬೇತಿಯಲ್ಲಿ ಭಾಗವಹಿಸಿ,ತಮ್ಮ ಕಾರ್ಯಕ್ಷೇತ್ರವನ್ನು ಮಾದರಿ ಕ್ಷೇತ್ರವಾಗಿ ಮಾರ್ಪಾಡಿಸಲು ಸಾಧ್ಯವಾಗಲಿ. **– ಡೆಬ್ರ ಡಿಸೋಜ.**

ಕಾರ್ಯಗಾರದ ವಿಷಯಗಳು ಉತ್ತಮವಾಗಿದ್ದವು. **– ಆರ್.ಎಂ. ಅರಕೇರಿ.**

ಈ ತರಬೇತಿ ಕಾರ್ಯಕ್ರಮದಿಂದ ಯಶಸ್ವಿಯಾಗಿ ಕಾರ್ಯ ನಿರ್ವಹಿಸಲು ಸಹಕಾರಿಯಾಗಿದೆ. **– ಸುರೇಶ್ ಪಿ.**

ಈ ತರಬೇತಿಯು ಪ್ರಗತಿಯದಾರಿದೀಪದ ಮಾರ್ಗವಾಗಿದೆ. **– ಗೋವಿಂದಾಚಾರಿ.**

ತರಬೇತಿಯು ಕೌಶಲ್ಯದಿಂದ ಕೂಡಿತ್ತು. **– ವಿರೇಶ್ ಗು. ಶಿರೋಳ.**

ಆಹಾರದ ವ್ಯವಸ್ಥೆ ಉತ್ತಮವಾಗಿತ್ತು. **– ಬಿ.ಶೇಖರಪ್ಪ.**

ಎಲ್ಲವೂ ತುಂಬಾ ಚೆನ್ನಾಗಿತ್ತು. **– ದಿವ್ಯ ಟಿ.ಕೆ.**

ಶಿಬಿರಾರ್ಥಿಗಳಿಗೆ ಶುಭ ಹಾರೈಸಿದ ರವಿರಾಜ ಹೆಗಡೆ

ಹಾಗೂ ಈ ಮುಕ್ತಾಯ ಸಮಾರಂಭದ ವ್ಯವಸ್ಥೆಗಳನ್ನು ಶಿಬಿರಾರ್ಥಿಗಳಲ್ಲಿನ ಉತ್ಸಾಹ, ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿರುವ ಆಸಕ್ತಿ ನೋಡಿದರೆ ಇದೊಂದು ಅತ್ಯಂತ ಸುವ್ಯವಸ್ಥಿತ ಹಾಗೂ ಮಾದರಿ ತರಬೇತಿ ಕಾರ್ಯಕ್ರಮವಾಗಿದೆ.

ಈ ರೀತಿಯ ತರಬೇತಿ ವ್ಯವಸ್ಥೆಗಳು ಸಹಕಾರಿ ಸಂಸ್ಥೆಗಳ ತರಬೇತಿ ಕಾರ್ಯಕ್ರಮಗಳಲ್ಲಿ ಅವಶ್ಯಕ ಹಾಗೂ ಅಭಿವೃದ್ಧಿಗೆ ಪೂರಕ ಎಂದು ತಿಳಿಸಿ ತರಬೇತಿ ಪಡೆದ ಶಿಬಿರಾರ್ಥಿಗಳಿಗೆ ಶುಭ ಕೋರಿದರು.

ಉತ್ತಮ ಮಿಲಿ ಪ್ರಶಸ್ತಿ – ಶ್ರೀ ಓಂಕಾರ ಬಿರಾದಾರ. ಸಿದ್ಧಸಿರಿ ಸೌಹಾರ್ದ ಬಿಜಾಪುರ. **ಉತ್ತಮ ಇನ್ಸ್ಟಂಟ ಮಿಲಿ** – ಶ್ರೀಮತಿ ಆಶಾ. ಸ್ವಾಭಿಮಾನಿ ಸಹಕಾರಿ ಬೆಂಗಳೂರು. **ಉತ್ತಮ ಶಿಬಿರಾರ್ಥಿ ಪುರುಷ ವಿಭಾಗ** – ಶ್ರೀ ಗೋವಿಂದಾಚಾರ್ಯ ಲಿಂಗಸೂರು. **ಉತ್ತಮ ಶಿಬಿರಾರ್ಥಿ ಮಹಿಳಾ ವಿಭಾಗ** – ಶ್ರೀಮತಿ ಡೆಬ್ರಾ ಡಿಸೋಜ ಸುರಕ್ಷ ಸೌಹಾರ್ದ ಉಡುಪಿ. **ಉತ್ತಮ ಪ್ರಾರ್ಥನೆ** – ಕುಮಾರಿ ಸುಧಾ ಶುಶ್ರುತಿ ಸೌಹಾರ್ದ ಸಹಕಾರಿ ಬ್ಯಾಂಕ್ ಬೆಂಗಳೂರು. **ಉತ್ತಮ ನಿರೂಪಣೆ** – ಕುಮಾರಿ ದಿವ್ಯಾ. **ಉತ್ತಮ ಸಂವಹನಕಾರ ಪುರುಷ ವಿಭಾಗ** – ಶ್ರೀ ರಂಗನಾಥ ಮಯೂರ ಸೌಹಾರ್ದ ಸಾಗರ. **ಮಹಿಳಾ ವಿಭಾಗ** – ಶ್ರೀಮತಿ ಭಾರತಿ ತುಮಕೂರು. **ಉತ್ತಮ ತಂಡಗಳು** – (ಪ್ರತಿದಿನದ ವರದಿ ಸಲ್ಲಿಸುವುವಿಕೆ, ಸಮಯ ಪಾಲನೆ, ಶಿಸ್ತು ಸ್ವಚ್ಛತೆ, ವ್ಯವಸ್ಥೆಗಳು ಹಾಗೂ ಉಟೋಪಚಾರಗಳ ವ್ಯವಸ್ಥೆ ಮುಂತಾದವುಗಳ ನಿರ್ವಹಣೆ.) ಎಲ್ಲೊ ಸ್ಪಾರ್ಸ, ಗೋಲ್ಡನ್ ಗ್ರೂಪ, ಫ್ರೆಂದ ವಾಯಿಟ್ ಹಾಗೂ ಸಮುದ್ರ ಂಡದವರು. ಶ್ರೀ ಗೋವಿಂದಾಚಾರ್ಯ ಹಾಗೂ ಶ್ರೀ ಣೇಶ ಇವರು ಕಾರ್ಯಕ್ರಮ ನಿರೂಪಣೆ ಮಾಡಿದರು.

ಈ ತರಬೇತಿಯಿಂದ ಸೌಹಾರ್ದ ಸಹಕಾರಿಯ ಬಗ್ಗೆ ಸಂಪೂರ್ಣ ಅರಿವು ಮೂಡಿದೆ. – **ಎನ್.ಶ್ರೀನಾಥ್.**

ನಮ್ಮ ವೃತ್ತಿ ಜೀವನಕ್ಕೆ ಮಾದರಿ. – **ನಾಗರಾಜ.ಬ.ಯಡಳ್ಳಿ.**

ಆಲ್ ಇಸ್ ವೆಲ್ – **ಸುನಿಲ್ ಎಸ್.ವೈ**

ಎಲ್ಲ ವಿಷಯಗಳ ಗುಚ್ಛವಾಗಿತ್ತು. – **ಚೇತನ್ ಕಾಮತ್**

ಈ ತರಬೇತಿಯಿಂದ ವ್ಯಕ್ತಿತ್ವ ವಿಕಸನವಾಗಿದೆ. – **ಸತೀಶ್ ವಿ. ಬಡಿಗೇರ.**

ಕಾರ್ಯಗಾರವು ಅತ್ಯುತ್ತಮವಾಗಿತ್ತು. – **ರಾಜೇಸಾಬ ಬಾಬು ಗರಿಬನ್ನವರ.**

ಅಧ್ಯಯನ ಸಾಹಿತ್ಯವು ಅತ್ಯುತ್ತಮವಾಗಿತ್ತು. – **ಭಾರತಿ .ಎಸ್.**

ಆಹಾರದ ವ್ಯವಸ್ಥೆ ಉತ್ತಮವಾಗಿತ್ತು. – **ಪ್ರದೀಪ್ ಎನ್.ವಿ.**

ಸೌಹಾರ್ದ ಸಹಕಾರಿ ಸಿಬ್ಬಂದಿಯವರಿಗೆ ಚೈತನ್ಯ ಕೊಡುವ ಕೆಲಸ ಈ ತರಬೇತಿ ಮಾಡುತ್ತಿದೆ. – **ಓಂಕಾರ್ ಜಿ. ಬಿರಾದರ್.**

ಉತ್ತಮವಾದ ವಾತಾವರಣದಲ್ಲಿತ್ತು. – **ಕಿಶನ್.**

ನಾವು ಸಹಕಾರಿ ಕ್ಷೇತ್ರದಲ್ಲಿ ಏನು ಬೇಕಾದರು ಸಾಧಿಸಬಹುದು ಎಂಬುದನ್ನು ನಮಗೆ ಈ ತರಬೇತಿಯಿಂದ ತಿಳಿಸಿಕೊಟ್ಟಿದ್ದಾರೆ. – **ಆನಂದ ಅ.ಪಾಶ್ವಪೂರ.**

ತರಬೇತಿಯಲ್ಲಿ ಸಾಫ್ಟ್‌ವೇರ್ ಬ್ಯಾಂಕಿಂಗ್ಕಾರ್ಯಗಳ ಕುರಿತು ತಿಳಿಸಿದ್ದರೆ ಉತ್ತಮವಾಗಿರುತ್ತದೆ. – **ಗಣೇಶ್.ಟಿ.**

ತರಬೇತಿ ಕಾರ್ಯಕ್ರಮವು ಚೆನ್ನಾಗಿ ಮೂಡಿಬಂದಿದೆ. – **ಬಸವರಾಜ.ರಾ. ಮರಡಿ.**

ಈ ಕಾರ್ಯಕ್ರಮವು ಮನುಷ್ಯನ ಬದಲಾವಣೆಗೆ ಒಳ್ಳೆಯಪೂರಕವಾಘಿ ವಿಷಯಗಳಿದ್ದವು. – **ಭೀಮಪ್ಪ .ರ.ಸುಣಧೋಳಿ.**

ಸಹಕಾರಿಯ ಜವಾಬ್ದಾರಿಯುತ ಅಧಿಕಾರಿಯಾಗಿ ಕಾರ್ಯನಿರ್ವಹಿಸಿ : ಎನ್.ಎಸ್. ಗೋಖಲೆ

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜಿಲ್ಲೆಯ ಹಿರಿಯ ಸಹಕಾರಿ ಶ್ರೀ ಎನ್.ಎಸ್.ಗೋಖಲೆಯವರು ಮಾತನಾಡಿ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಈ ಮಾದರಿಯಲ್ಲಿಯೆ ತರಬೇತಿಗಳು ನಡೆಯಬೇಕು. ಹಾಗಾದರೆನೆ ಸಿಬ್ಬಂದಿಯವರು ಉತ್ಸಾಹದಿಂದ ಭಾಗವಹಿಸುವುದರ ಜೊತೆಗೆ ಆಸಕ್ತಿಯಿಂದ ವಿಷಯಗಳ ಅಧ್ಯಯನ ಮಾಡಲು ಅವಕಾಶವಾಗುತ್ತದೆ. ತರಬೇತಿಗೆ ಕಳುಹಿಸಿದ ಸಹಕಾರಿ ಸಂಸ್ಥೆಗಳಿಗೆ ಆಸ್ತಿಯಾಗಿ ಜವಾಬ್ದಾರಿಯುತ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ. ಈ ರೀತಿಯ ತರಬೇತಿ ಕಾರ್ಯಕ್ರಮವನ್ನು ಆಯೋಜಿ ಸುತ್ತಿರುವ ಸಂಯುಕ್ತ ಸಹಕಾರಿಯು ಸಹಕಾರ ಕ್ಷೇತ್ರದಲ್ಲಿ ತರಬೇತಿ ನೀಡುತ್ತಿರುವ ಇತರೆ ಸಂಸ್ಥೆಗಳಿಗೆ ಮಾದರಿಯಾಗಿದೆ ಎಂದು ತಿಳಿಸಿದರು

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಶ್ರೀ ಭಾಸ್ಕರ ಕಾಮತ, ನಾಗರಿಕ ಸೇವಾ ಟ್ರಸ್ಟನ ಅಧ್ಯಕ್ಷ ಶ್ರೀ ಸೋಮನಾಥ ನಾಯಕ, ಕಾರ್ಯದರ್ಶಿ ಶ್ರೀ ಜಯಪ್ರಕಾಶ, ನಿರ್ದೇಶಕಿ ಶ್ರೀಮತಿ ವಿದ್ಯಾ, ಸರಸ್ವತಿ ಸೌಹಾರ್ದ ಸಹಕಾರಿಯ ಶ್ರೀ ಸುನೀಲ ಬೋರಕರ ಜಿಲ್ಲೆಯ ಹಿರಿಯ ಸಹಕಾರಿ ಶ್ರೀ ಭೋಜರಾಜ ಹೆಗಡೆ ಮುಂತಾದವರು ಭಾಗವಹಿಸಿದ್ದರು.

ಶಿಬಿರಾರ್ಥಿಗಳು ನಡೆಸಿಕೊಟ್ಟ ಈ ಕಾರ್ಯಕ್ರಮವನ್ನು ಕುಮಾರಿ ಸುಧಾರವರ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಯಿತು. ನಂತರ ಸಾಮೂಹಿಕವಾಗಿ ಸಹಕಾರ ಗೀತೆ., ಶ್ರೀ ಸತೀಶ ಬಡಿಗೇರವರಿಂದ ಸ್ವಾಗತ., ಶ್ರೀಮತಿ ಆಶಾರವರಿಂದ ಶಿಬಿರದ ವರದಿ, ಸಂಯುಕ್ತ ಸಹಕಾರಿಯ ಅಧಿಕಾರಿ ಶ್ರೀ ರಘುನಂದನರವರಿಂದ ಶಿಬಿರದ ವಿಶೇಷ ಗಳ ಬಗ್ಗೆ ವರದಿ, ಶಿಬಿರಾರ್ಥಿಗಳಿಂದ ಅನಿಸಿಕೆಗಳು ನಂತರ ಅತಿಥಿಗಳನ್ನು ಸತ್ಕರಿಸಲಾಯಿತು. ಶಿಬಿರದಲ್ಲಿ ಭಾಗವಹಿಸಿದ ಎಲ್ಲ ಪ್ರತಿನಿಧಿಗಳಿಗೆ ಪ್ರಮಾಣ ಪತ್ರಗಳನ್ನು ಗಣ್ಯರು ವಿತರಿಸಿದರು ಶಿಬಿರದ ಹತ್ತು ದಿನಗಳ ತರಬೇಇ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡ ಶಿಬಿರಾರ್ಥಿಗಳನ್ನು ಗುರುತಿಸಿ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ 33 ಸಹಕಾರಿಗಳಿಂದ 50 ಜನರು ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದರು.

"ಸೌಹಾರ್ದ ರಾಯಭಾರಿ"

ಶ್ರೀ ಜಿ.ಟಿ.ದೇವೇಗೌಡ

ಶ್ರೀ ಎಂ.ಎನ್. ರಾಜೇಂದ್ರಕುಮಾರ್

ಶ್ರೀ ಶಾಂತರಾಮ ಹೆಗಡೆ

ಶ್ರೀ ಹಳಸೆ ಶಿವಣ್ಣ

"ಸೌಹಾರ್ದ ರಾಯಭಾರಿ" (Good will Ambassador) ಅಂತರರಾಷ್ಟ್ರೀಯ ಗೌರವ ಪ್ರಶಸ್ತಿ ಪುರಸ್ಕೃತ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಶ್ರೀ ಜಿ.ಟಿ.ದೇವೇಗೌಡರವರಿಗೆ, ಕ್ಷೇತ್ರದ ಸಾಧನೆಗಾಗಿ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷ ಶ್ರೀ ಎಮ್.ಎನ್. ರಾಜೇಂದ್ರಕುಮಾರ, ಉತ್ತರ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷ ಶ್ರೀ ಶಾಂತಾರಾಮ ಹೆಗಡೆ, ಚಿಕ್ಕಮಗಳೂರಿನ ಶ್ರೀ ಹಳಸೆ ಶಿವಣ್ಣ.

ಆಯ್ಕೆ

ಶ್ರೀ ಅನೂಪ್ ದೇಶಪಾಂಡೆ

ಶ್ರೀ ಉಪೇಂದ್ರನಾಯಕ್

ಶ್ರೀ ಅನೂಪ್ ದೇಶಪಾಂಡೆ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ನೇಮಕ. ಉಡುಪಿಯ ಜನಹಿತ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಉಪೇಂದ್ರನಾಯಕ್ ಉಡುಪಿ ಜಿಲ್ಲಾ ಪಂಚಾಯತ್ ಅಧ್ಯಕ್ಷರಾಗಿ ಆಯ್ಕೆ.

ಈ ಎಲ್ಲಾ ಸಹಕಾರಿಗಳಿಗೆ ಸೌಹಾರ್ದ ಸಹಕಾರಿಯ ಆಡಳಿತಮಂಡಳಿ ಪರವಾಗಿ ಅಭಿನಂದನೆ ಸಲ್ಲಿಸುತ್ತದೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ನಿರ್ಮಾಣ ಭವನ, ಡಾ. ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010
www.souharda.coop, Ph: 080-23378375-80, E-mail: souharda@souharda.coop

ಪ್ರಸ್ತಾವನೆ

ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ ಕಲಂ 22ರನ್ವಯ ಯಾವುದೇ ಸಂಸ್ಥೆಯು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಪರವಾನಗಿ (License) ಇಲ್ಲದೇ ಬ್ಯಾಂಕಿಂಗ್ ವ್ಯವಹಾರ ನಡೆಸುವಂತಿಲ್ಲ. ಸದಸ್ಯೆತರರಿಂದ ಠೇವಣಿ ಸ್ವೀಕರಿಸಿದಲ್ಲಿ ಕಾಯ್ದೆಯಂತೆ ಅದು ಬ್ಯಾಂಕಿಂಗ್ ವ್ಯವಹಾರವಾಗುತ್ತದೆ. ಆದ್ದರಿಂದ ಯಾವುದೇ ಸಹಕಾರಿಯು ಸದಸ್ಯೇತರರಿಂದ ಠೇವಣಿ ಸ್ವೀಕರಿಸಲು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಪರವಾನಗಿ (License) ಪಡೆದಿರಬೇಕಾಗುತ್ತದೆ.

ಹಲವಾರು ಸೌಹಾರ್ದ ಸಹಕಾರಿಗಳು ಬ್ಯಾಂಕಿಂಗ್ ಪರವಾನಗಿ (License) ಪಡೆದುಕೊಳ್ಳದೆ ಸದಸ್ಯೇತರಿಂದ ಠೇವಣಿ ಸ್ವೀಕರಿಸುತ್ತಿವೆ. ಕೆಲವು ಸಹಕಾರಿಗಳು ತಮ್ಮ ಉಪವಿಧಿಗಳಲ್ಲಿ ಸದಸ್ಯೇತರರಿಂದ ಠೇವಣಿ ಸ್ವೀಕರಿಸುವ ಕುರಿತು ಪ್ರಾವಧಾನ ಮಾಡಿಕೊಂಡಿವೆ. ಆದರೆ ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮದಂತೆ ರಿಸರ್ವ್ ಬ್ಯಾಂಕಿನ ಅನುಮತಿ ಪಡೆಯದೇ ಸದಸ್ಯೆತರರಿಂದ ಠೇವಣಿ ಪಡೆಯುವಂತಿಲ್ಲ. ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮವು ಕೇಂದ್ರ ಅಧಿನಿಯಮವಾಗಿದ್ದು, ರಾಜ್ಯದ ಯಾವುದೇ ಅಧಿನಿಯಮದಲ್ಲಿ ಏನೇ ಹೇಳಿದ್ದರೂ, ಕೇಂದ್ರ ಅಧಿನಿಯಮದಲ್ಲಿನ ಪ್ರಾವಧಾನಗಳು ಅನ್ವಯವಾಗುತ್ತವೆ. ಭಾರತೀಯ ರಿಸರ್ವ್ ಬ್ಯಾಂಕ್ ಈ ಎಲ್ಲಾ ಅಂಶಗಳನ್ನು ಗಮನಿಸಿ, ಎಲ್ಲಾ ಸೌಹಾರ್ದ ಸಹಕಾರಿಗಳಿಗೂ ಅನ್ವಯವಾಗುವ ರೀತಿಯಲ್ಲಿ ಸದಸ್ಯೇತರರಿಂದ ಠೇವಣಿ ಸ್ವೀಕರಿಸಿದಂತೆ ಮಾರ್ಗದರ್ಶಿಯನ್ನು ನೀಡಲು ಸೂಚಿಸಿರುತ್ತಾರೆ. ದಿನಾಂಕ 28 ಡಿಸೆಂಬರ್ 2012 ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಚರ್ಚಿಸಿ, ಅನುಮೊದಿಸಿದಂತೆ ಈ ಕೆಳಗಿನ ಸುತ್ತೋಲೆಯನ್ನು ನೀಡಲಾಗುತ್ತಿದೆ.

ಸುತ್ತೋಲೆ

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಲಂ53(7)(ಎ) ರಡಿ

ಸಂಖ್ಯೆ: ಸಂ.ಸ/ ಸುತ್ತೋಲೆ/11/2012–13 ದಿನಾಂಕ : 07 ಜನವರಿ 2013

1. ರಿಸರ್ವ್ ಬ್ಯಾಂಕಿನಿಂದ ಪರವಾನಗಿ ಪಡೆದ ಸಹಕಾರಿ ಬ್ಯಾಂಕುಗಳನ್ನು ಹೊರತುಪಡಿಸಿ, ಯಾವುದೇ ಸೌಹಾರ್ದ ಸಹಕಾರಿಯು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997ರ ಕಲಂ 22ರ ಅವಕಾಶದಡಿ ತನ್ನ ಉಪವಿಧಿಯಲ್ಲಿ ಪ್ರಾವಧಾನ ಕಲ್ಪಿಸಿಕೊಂಡಿದ್ದರೂ ಸಹ ಸದಸ್ಯೇತರರಿಂದ ಠೇವಣಿ ಸ್ವೀಕರಿಸತಕ್ಕದ್ದಲ್ಲ.

2. ಯಾವುದೇ ವ್ಯಕ್ತಿಯಿಂದ ಠೇವಣಿಯನ್ನು ಸ್ವೀಕರಿಸುವ ಪೂರ್ವದಲ್ಲಿ ಅವನನ್ನು ಕಡ್ಡಾಯವಾಗಿ ಸಹಕಾರಿಯ ಸದಸ್ಯನನ್ನಾಗಿ ಮಾಡಿಕೊಂಡಿರತಕ್ಕದ್ದು ಮತ್ತು ಅವನಿಗೆ ಸದಸ್ಯತ್ವದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಲಿಖಿತರೂಪದಲ್ಲಿ ತಿಳಿಸಿರತಕ್ಕದ್ದು.

ಈ ಸುತ್ತೋಲೆ/ ಮಾರ್ಗದರ್ಶಿಯನ್ನು ನನ್ನ ಸಹಿ ಹಾಗೂ ಮೊಹರಿನೊಂದಿಗೆ ಇಂದು ಅಂದರೆ 07 ಜನವರಿ 2013ರಂದು ಹೊರಡಿಸಲಾಗಿದೆ.

ಸಹಿ/–
(ಶರಣಗೌಡ ಜಿ.ಪಾಟೀಲ್)
ವ್ಯವಸ್ಥಾಪಕ ನಿರ್ದೇಶಕ.

ಆದಾಯ ತೆರಿಗೆ ಮಾಹಿತಿಗಾಗಿ ವೆಬ್‌ತಾಣ

http://www.incometaxindia.gov.in

■ ರಘುನಂದನ ಕೆ.
ಸಹಪ್ರಧಾನ ವ್ಯವಸ್ಥಾಪಕ,
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

http://www.ncui.coop

ಏಕಸ್ವಾಮ್ಯಯುತವಾದ ಸಂಪತ್ತಿನ ಕ್ರೋಢೀಕರಣವನ್ನು ತಪ್ಪಿಸಿ ಸರ್ವರಿಗೂ ಮೂಲಭೂತ ಅವಶ್ಯಕತೆಗಳನ್ನು ಒದಗಿಸುವುದರ ಮೂಲ ಉದ್ದೇಶದೊಂದಿಗೆ ತೆರಿಗೆಯ ಸ್ವರೂಪ ರಚನೆಯಾಯಿತು. ಒಬ್ಬ ವ್ಯಕ್ತಿ ಅಥವಾ ಸಂಸ್ಥೆ ತಾನು ಗಳಿಸಿದ ಆದಾಯಕ್ಕನುಗುಣವಾಗಿ ಸರ್ಕಾರಕ್ಕೆ ಪಾವತಿಸಬೇಕಾದ ಮೊತ್ತವನ್ನು ಆದಾಯ ತೆರಿಗೆ ಎನ್ನಬಹುದು. ಪ್ರತೀ ವರ್ಷ ತೆರಿಗೆ ವ್ಯವಸ್ಥೆಯಲ್ಲಿ ಹಲಕೆಲವು ಬದಲಾವಣೆಯನ್ನು ತರುವುದರ ಮೂಲಕ ತೆರಿಗೆಯ ವ್ಯಾಪ್ತಿಯನ್ನು ನಿರ್ಧರಿಸುವ ಕ್ರಮ ಅಸ್ತಿತ್ವದಲ್ಲಿದೆ. ತೆರಿಗೆಯಲ್ಲಿ ವ್ಯಕ್ತಿಗತ ತೆರಿಗೆ ಹಾಗೂ ಸಾಂಸ್ಥಿಕ ತೆರಿಗೆ ಸ್ವರೂಪಗಳಿವೆ. "ವಿಶ್ವದಲ್ಲಿ ಅರ್ಥಮಾಡಿಕೊಳ್ಳಲು ಅತ್ಯಂತ ಕಠಿಣವೆನಿಸುವ ವಿಷಯವೆಂದರೆ ಆದಾಯ ತೆರಿಗೆ" ಎನ್ನುವ ಅಲ್ಬರ್ಟ್ ಐನ್‌ಸ್ಟೈನ್‌ರವರ ಹೇಳಿಕೆ ತೆರಿಗೆಯ ವ್ಯಾಪ್ತಿ ವಿಸ್ತಾರವನ್ನು ಸೂಚಿಸುತ್ತದೆ.

ಪ್ರತೀ ಸಂಸ್ಥೆಯು ತನ್ನ ಹಣಕಾಸಿನ ವ್ಯವಹಾರದಲ್ಲಿ ತೆರಿಗೆಯ ವ್ಯಾಪ್ತಿಯಲ್ಲಿ ಕೆಲಸ ಮಾಡುವುದು ಅನಿವಾರ್ಯ. ಸಹಕಾರ ಸಂಸ್ಥೆಗಳು ಕೂಡ ಇದಕ್ಕೆ ಹೊರತಾಗಿರುವುದಿಲ್ಲ. ಆದರೆ ಕೆಲವು ವ್ಯವಹಾರಗಳಲ್ಲಿ ವಿನಾಯತಿಯನ್ನು ಪಡೆಯಬಹುದಷ್ಟೆ. ಯಾವ ಸಹಕಾರಿಯ ಒಟ್ಟೂ ವಾರ್ಷಿಕ ವಹಿವಾಟು ಒಂದು ಕೋಟಿ ರೂಪಾಯಿಗಳನ್ನು ದಾಟುತ್ತದೋ ಅದು ಆದಾಯದ ವಿವರಗಳನ್ನು ಸಲ್ಲಿಸುವುದು ಕಡ್ಡಾಯವಿರುತ್ತದೆ. ಸದಸ್ಯೇತರರೊಂದಿಗಿನ ವ್ಯವಹಾರದಿಂದ ಸಹಕಾರಿಯು ಗಳಿಸುವ ಲಾಭಕ್ಕೆ ಆದಾಯ ತೆರಿಗೆ ಪಾವತಿಸಬೇಕಾಗುತ್ತದೆ. ಇಂತಹ ಅನೇಕ ವಿಷಯಗಳು ಬೇರೆ ಬೇರೆ ವಿಧದ ತೆರಿಗೆಯ ಪಾವತಿಯನ್ನು ನಿರ್ದೇಶಿಸುತ್ತವೆ.

ಸರ್ಕಾರದ ಆದಾಯ ತೆರಿಗೆ ಸಂಗ್ರಹಣೆ, ಮೇಲ್ವಿಚಾರಣೆ, ಆದಾಯ ತೆರಿಗೆ ಕಾಯ್ದೆಯ ಪರಿಪಾಲನೆಯನ್ನು ನಿರ್ವಹಿಸುವುದಕ್ಕಾಗಿ ಕೇಂದ್ರ ಸರ್ಕಾರವು ಹಣಕಾಸು ಸಚಿವಾಲಯದ ಅಡಿಯಲ್ಲಿ ಆದಾಯ ತೆರಿಗೆ ಇಲಾಖೆಯನ್ನು ಹೊಂದಿರುತ್ತದೆ. ಈ ಇಲಾಖೆ ಹಾಗೂ ಆದಾಯ ತೆರಿಗೆಯೆಡೆಗೆ ಹೆಚ್ಚಿನ ಮಾಹಿತಿಯನ್ನು ಒದಗಿಸುವ ಅನುಕೂಲಕ್ಕಾಗಿ ಆದಾಯ ತೆರಿಗೆಯ ವೆಬ್‌ತಾಣವನ್ನು ಪರಿಚಯಿಸಲಾಗುತ್ತಿದೆ.

ವೆಬ್‌ತಾಣ 07 : http://www.incometaxindia.gov.in

- ತೆರಿಗೆಯ ಸ್ವರೂಪ ಹಾಗೂ ಇತಿಹಾಸ, ಕಾರ್ಯಾಚರಣೆ ಹಾಗೂ ಕಾರ್ಯಯೋಜನೆಯ ರೂಪರೇಷೆಗಳು, ನೇರ ತೆರಿಗೆ ಕೇಂದ್ರೀಯ ಮಂಡಳಿ (CBDT) ಇದರ ಸಾಂಸ್ಥಿಕ ರಚನೆ, ಜವಾಬ್ದಾರಿ,



ಕಾರ್ಯಚಟುವಟಿಕೆಗಳ ವಿವರಗಳನ್ನು ಈ ವೆಬ್‌ತಾಣದಲ್ಲಿ ನೋಡಬಹುದು.

- ಆದಾಯ ತೆರಿಗೆ ಕಾಯ್ದೆ ಹಾಗೂ ನಿಯಮ, ಸಾಂಪತ್ತಿಕ ತೆರಿಗೆ ಕಾಯ್ದೆ, ಗಿಫ್ಟ್ ಟ್ಯಾಕ್ಸ್ ಆಕ್ಟ್, ವೆಚ್ಚ ಹಾಗೂ ಬಡ್ಡಿಗೆ ಸಂಬಂಧಿಸಿದ ತೆರಿಗೆ ಕಾಯ್ದೆ, ಹಣಕಾಸು ಕಾಯ್ದೆ ಹಾಗೂ ಈ ಎಲ್ಲ ಕಾಯ್ದೆಗಳ ನಿಯಮಗಳನ್ನು, ಸರ್ಕಾರದ ಅಧಿಸೂಚನೆ ಹಾಗೂ ಪ್ರಕಟಣೆಗಳನ್ನು ಈ ವೆಬ್‌ತಾಣದಲ್ಲಿ ಪಡೆಯಬಹುದು.
- ಆದಾಯ ತೆರಿಗೆ ಹಾಗೂ ಸಾಂಪತ್ತಿಕ ತೆರಿಗೆಯನ್ನು ಇಲಾಖೆಗೆ ಸಲ್ಲಿಸುವ ನಮೂನೆಗಳಲ್ಲದೆ, ವಿವಿಧ ತೆರಿಗೆಗಳಿಗೆ ಸಂಬಂಧಿಸಿದ ಪಾವತಿ ನಮೂನೆಗಳನ್ನು ಇಲ್ಲಿ ಪಡೆಯಬಹುದು. ಮುಖ್ಯವಾಗಿ ಮೂಲದಲ್ಲೇ ತೆರಿಗೆ ಕಡಿತದ ಎಲ್ಲ ವಿವರಗಳನ್ನು, ಫಾರ್ಮ್ ನಂ.16ನ್ನು, ಪಾವತಿ ಚಲನ್‌ನ್ನು ಇಲ್ಲಿ ನೋಡಬಹುದು.
- ಪಾನ್ ಕಾರ್ಡ್ (PAN Card) ಹಾಗೂ ಟ್ಯಾನ್ (TAN) ಕುರಿತಾದ ಮಾಹಿತಿಗಳು ಅಂದರೆ ಇವುಗಳನ್ನು ಪಡೆಯುವ ವಿಧಾನ, ಅಗತ್ಯವಾದ ದಾಖಲಾತಿಗಳ ವಿವರ, ಸಂಬಂಧಿಸಿದ ನಮೂನೆ, ಅರ್ಜಿಸಲ್ಲಿಸುವ ಕೇಂದ್ರಗಳು ಇತ್ಯಾದಿ ವಿವರಗಳನ್ನು ಪಡೆಯಬಹುದು. ಇದಕ್ಕೆ ಸಂಬಂಧಿಸಿದ ಯಾವುದೇ ದೂರುಗಳನ್ನು ಸಲ್ಲಿಸಬಹುದು. ಅಲ್ಲದೆ ನೇರವಾಗಿ ಆನ್‌ಲೈನ್ ಮೂಲಕ ಇವನ್ನು ಪಡೆಯಲು ಅರ್ಜಿ ಸಲ್ಲಿಸುವ ಅವಕಾಶವನ್ನು ಕೂಡ ಒದಗಿಸಲಾಗಿದೆ.
- ವಿವಿಧ ತೆರಿಗೆಗಳನ್ನು ಆನ್‌ಲೈನ್ ಮೂಲಕ ಪಾವತಿಸುವ, ಪಾವತ್ತಿಸಿದ ವಿವರಗಳನ್ನು ನೋಡುವ, ಹೆಚ್ಚಿನ ಪಾವತಿಯನ್ನು

ಹಿಂಪಡೆಯುವ ಅವಕಾಶವನ್ನು ಕೆಲವು ನಿಬಂಧನೆಗೊಳಪಟ್ಟು ಈ ವೆಬ್‌ತಾಣದಲ್ಲಿ ಕಲ್ಪಿಸಲಾಗಿದೆ.

- ವಾರ್ಷಿಕ ತೆರಿಗೆಯ ಸ್ವರೂಪ, ತೆರಿಗೆಗೆ ಸಂಬಂಧಿಸಿದ ವಿದ್ಯಮಾನಗಳು, ಚಲನ್ ತಿದ್ದುಪಡಿಯ ಮಾಹಿತಿ, ತೆರಿಗೆದಾರರಿಗೆ ಮಾಹಿತಿ ಕೈಪಿಡಿ, ಕರಪತ್ರಗಳು, ತೆರಿಗೆ ಲೆಕ್ಕಾಚಾರ ಮಾಡುವ ವಿಧಾನಗಳು, ಆದಾಯಕ್ಕೆ ಹಣಕಾಸಿನ ವ್ಯವಹಾರಕ್ಕೆ ಅನ್ವಯಿಸುವ ವಿವಿಧ ತೆರಿಗೆಗಳು ಇತ್ಯಾದಿಗಳ ಮಾಹಿತಿಯನ್ನು ಈ ವೆಬ್‌ತಾಣದಿಂದ ಪಡೆಯಬಹುದು.
- ತೆರಿಗೆ ಮಾಹಿತಿ ಜಾಲ, ಆಯಕರ ಸಂಪರ್ಕ ಕೇಂದ್ರ, ತೆರಿಗೆ ಪಾವತಿಸಬಹುದಾದ ಬ್ಯಾಂಕ್ ಶಾಖೆಗಳ ವಿವರ, ಆಯಾ ರಾಜ್ಯಗಳಲ್ಲಿನ ತೆರಿಗೆ ಇಲಾಖೆಯ ಕಛೇರಿಗಳು ಹಾಗೂ ಅಧಿಕಾರಿಗಳು, ಈ ಇಲಾಖೆಯ ನ್ಯಾಯಿಕ ಸ್ಥಾನ ಇತ್ಯಾದಿ ವಿವರಗಳು ಈ ವೆಬ್‌ತಾಣದಲ್ಲಿ ಲಭ್ಯ.
- ಅಂತಾರಾಷ್ಟ್ರೀಯ ತೆರಿಗೆಯ ಸ್ವರೂಪ ಹಾಗೂ ಮಾಹಿತಿ, ನೇರ ತೆರಿಗೆ ಸಂಹಿತೆ 2010 ಇದರ ಮಾಹಿತಿ, ಪತ್ರಿಕಾ ಪ್ರಕಟಣೆಗಳು, ಇಲಾಖಾ ಸಮಾಚಾರಗಳು ಮುಂತಾದ ವಿಷಯಗಳನ್ನು ಈ ವೆಬ್‌ತಾಣದಿಂದ ಅರಿಯಬಹುದು.

ಯಾವುದೇ ವೆಬ್‌ತಾಣಗಳು ಅನೇಕ ಮಾಹಿತಿಗಳ ಕಣಜಗಳಾಗಿರುತ್ತವೆ. ಅವುಗಳ ಸಂಪೂರ್ಣ ವಿವರಗಳನ್ನು ಹೇಳುವುದಕ್ಕಿಂತ ಕಿರು ಪರಿಚಯದ ಮೂಲಕ ಅರಿವನ್ನು ವಿಸ್ತರಿಸಿಕೊಳ್ಳಲು ಆಸಕ್ತರಿಗೆ ಅವಕಾಶ ಒದಗಿಸುವ ಪ್ರಯತ್ನ ನಮ್ಮದು.

ಉದ್ದೇಶಿತ ಜಾರಿಯಾಗಬಹುದಾದ ನೇರ ತೆರಿಗೆ ಸಂಹಿತೆಯ ಪರಿಣಾಮದ ಆತಂಕ ಸಹಕಾರ ಕ್ಷೇತ್ರವನ್ನು ಕಾಡುತ್ತಿರುವ ಈ ಸಂದರ್ಭದಲ್ಲಿ, ತೆರಿಗೆ ಪಾವತಿಸುವಂತೆ ಸೂಚಿಸಿ ಆದಾಯ ತೆರಿಗೆ ಇಲಾಖೆ ಸಹಕಾರ ಸಂಸ್ಥೆಗಳಿಗೆ ಅಲ್ಲಲ್ಲಿ ನೋಟೀಸ್ ನೀಡುತ್ತಿರುವುದರಿಂದ ಆದಾಯ ತೆರಿಗೆಗೆ ಸಂಬಂಧಿಸಿದಂತೆ ಸಹಕಾರ ಕ್ಷೇತ್ರ ಹೆಚ್ಚಿನ ವಿವರಗಳನ್ನು ಜ್ಞಾನವನ್ನು ಅಧ್ಯಯನವನ್ನು ಹೊಂದಬೇಕಾದ ಅವಶ್ಯಕತೆಯಿದೆ. ಸಹಕಾರ ಕ್ಷೇತ್ರದಲ್ಲಿ ತೊಡಗಿರುವ ವ್ಯಕ್ತಿಗಳೂ ಸಂಸ್ಥೆಗಳೂ ತೆರಿಗೆ ವ್ಯಾಪ್ತಿಯಲ್ಲಿ ಇರಬಹುದಾದ ಬರಬಹುದಾದ ಕಾರಣ ಆದಾಯ ತೆರಿಗೆಯ ಕುರಿತು ಹೆಚ್ಚಿನ ಅರಿವು ಪಡೆಯಲು ಅನುಕೂಲವಾಗುವಂತೆ, ಬದಲಾಗುವ ತೆರಿಗೆ ಸ್ವರೂಪದ ವಿವರವನ್ನು, ಇತರ ಮಾಹಿತಿಯನ್ನು ಪಡೆಯಲು ಅವಕಾಶವಾಗುವಂತೆ ಈ ವೆಬ್‌ತಾಣವನ್ನು ಆಗಾಗ್ಗೆ ಸಂದರ್ಶಿಸುತ್ತಿರಬಹುದು.

ಸ್ವಾಭಿಮಾನಿ ಸಹಕಾರಿಯ ಬಗ್ಗೆ ಅನಿಸಿಕೆ

- ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆಯು ಸ್ವಾಯತ್ತತೆ, ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣಗಳಂತಹ ಮಹತ್ವದ ಧ್ಯೇಯಗಳನ್ನಿಟ್ಟು ಕೊಂಡು ಬಹಳ ಅದ್ಭುತವಾದ ಪುಟವಿನ್ಯಾಸದೊಂದಿಗೆ ಮೂಡಿಬರುತ್ತಿದೆ. ಪತ್ರಿಕೆಯಲ್ಲಿ ಗುಣಮಟ್ಟದ ವಿಷಯಗಳು, ಲೇಖನಗಳು,ಬಹಳ ವೈಚಾರಿಕತೆಯಿಂದ ಕೂಡಿರುತ್ತವೆ. ಪತ್ರಿಕೆಯ ಸಂಪಾದಕೀಯ ಬಹಳ ಮಹತ್ವ ವಿಷಯಗಳನ್ನು ಹೊಂದಿರುತ್ತದೆ. ಮುಖಪುಟ ವಿನ್ಯಾಸ ಚೆನ್ನಾಗಿರುತ್ತದೆ.

  ☛ ನರಸಿಂಹ, ಸಂಶೋಧನಾ ವಿದ್ಯಾರ್ಥಿ ಸಮೂಹ ಸಂವಹನಮತ್ತು ಪತ್ರಿಕೋದ್ಯ ವಿಭಾಗ ಮಂಗಳೂರು ವಿಶ್ವವಿದ್ಯಾಲಯ.

- ಸೌಹಾರ್ದ ಸಂಯುಕ್ತ ಸಹಕಾರಿಯು ಪ್ರಕಟಿಸುತ್ತಿರುವ ಸ್ವಾಭಿಮಾನಿ ಸಹಕಾರ ಪತ್ರಿಕೆಯು ಉತ್ತಮ ವಿನ್ಯಾಸದಿಂದ ಉತ್ತಮ ವಿಷಯಗಳನ್ನೊಳಗೊಂಡು ಪ್ರಕಟ ವಾಗುತ್ತಿದೆ. ಸೌಹಾರ್ದ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗುವ ಮಾಹಿತಿಗಳು ಪ್ರಕಟವಾಗುತ್ತಿವೆ. ಪತ್ರಿಕೆಯು ಇದೇ ರೀತಿಯಲ್ಲಿ ತುಂಬಾ ಉಪಯುಕ್ತವಾಗಿ ಪ್ರಕಟವಾಗುತ್ತಿರಲಿ

  ☛ ರಘುಕುಮಾರ ಕೆ., ಮುಖ್ಯ ಕಾರ್ಯನಿರ್ವಹಣಾಧಿಕಾರಿ, ವಿವಿಎ ಸೌಹಾರ್ದ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಕೋಲಾರ.

‖ ಕಿಮ್ಮತ್ತು ‖

ಅಜ್ಞಾನ ಇಲ್ಲದೆ ಜ್ಞಾನಕ್ಕಿಲ್ಲದೆ ಕಿಮ್ಮತ್ತು
ಕತ್ತಲಿಲ್ಲದೆ ಬೆಳಕಿಗೆಲ್ಲಿದೆ ಕಿಮ್ಮತ್ತು
ಖರ್ಚಿಲ್ಲದೆ ಕಾಸಿಗೆಲ್ಲಿದೆ ಕಿಮ್ಮತ್ತು
ಕಷ್ಟ ಇಲ್ಲದೆ ಸುಖಕ್ಕೆಲ್ಲಿದೆ ಕಿಮ್ಮತ್ತು
ಸೋಲಿಲ್ಲದೆ ಗೆಲುವಿಗೆಲ್ಲಿದೆ ಕಿಮ್ಮತ್ತು
ಮರೆವು ಇಲ್ಲದಿದ್ದರೆ ನೆನಪಿಗೆಲ್ಲಿಯ ಕಿಮ್ಮತ್ತು
ಅಳು ಇಲ್ಲದೆ ನಗುವಿಗೆಲ್ಲಿದೆ ಕಿಮ್ಮತ್ತು
ಒಬ್ಬಂಟಿಯೆನಿಸದೆ ಸ್ನೇಹಕ್ಕೆಲ್ಲಿದೆ ಕಿಮ್ಮತ್ತು
ತಾಯಿಯಿಲ್ಲದೆ ವಾತ್ಸಲ್ಯಕ್ಕೆಲ್ಲಿದೆ ಕಿಮ್ಮತ್ತು
ಸೋದರತ್ವಯಿಲ್ಲದೆ ಕುಟುಂಬಕ್ಕೆಲ್ಲಿದೆ ಕಿಮ್ಮತ್ತು
ಗುಡಿಸಲಿಲ್ಲದೆ ಅರಮನೆಗೆಲ್ಲಿದೆ ಕಿಮ್ಮತ್ತು
ಸಂವಹನವಿಲ್ಲದೆ ಮಾಧ್ಯಮಗಳಿಗೆಲ್ಲಿದೆ ಕಿಮ್ಮತ್ತು
ಬರವಣಿಗೆ ಇಲ್ಲದೆ ಲೇಖನಿಗೆಲ್ಲಿದೆ ಕಿಮ್ಮತ್ತು
ಮನಸ್ಸಿಲ್ಲದೆ ಬುದ್ಧಿಗೆಲ್ಲಿದೆ ಕಿಮ್ಮತ್ತು
ಆತುರ ಇಲ್ಲದೆ ತಾಳ್ಮೆಗೆಲ್ಲಿದೆ ಕಿಮ್ಮತ್ತು
ಸಾವಿಲ್ಲದೆ ಬದುಕಿಗೆಲ್ಲಿದೆ ಕಿಮ್ಮತ್ತು
ಹಳೆವರುಷ ಇಲ್ಲದೆ ಹೊಸಹರುಷಕ್ಕೆಲ್ಲಿದೆ ಕಿಮ್ಮತ್ತು

–ಸವಿತ ಎನ್. ಇ.

ಕರ್ನಾಟಕ ಸಹಕಾರ ಸಂಘಗಳ 1959 (ತಿದ್ದುಪಡಿ) ವಿಧೇಯಕ 2012 ಪ್ರಮುಖ ಅಂಶಗಳು

ದಿನಾಂಕ 12.12.2012 ರಂದು ವಿಧಾನ ಸಭೆಯಲ್ಲಿ ಮತ್ತು 13.12.2012ರಂದು ವಿಧಾನ ಪರಿಷತ್ತಿನಲ್ಲಿ ಅಂಗೀಕಾರವಾಗಿರುತ್ತದೆ. ರಾಜ್ಯಪಾಲರ ಅನುಮೋದನೆಯ ನಂತರ, ಸರ್ಕಾರವು ಅಧಿಸೂಚನೆಯ ಮುಖಾಂತರ ಗೊತ್ತುಪಡಿಸಬಹುದಾದ ದಿನಾಂಕದಿಂದ ತಿದ್ದುಪಡಿಗಳು ಜಾರಿಗೆ ಬರುತ್ತವೆ.

ಸಾಮಾನ್ಯ ವಿಷಯಗಳು

1. ಅಧಿನಿಯಮ, ನಿಯಮಗಳಲ್ಲಿ ತಿದ್ದುಪಡಿಯಾದ 90 ದಿನಗಳ ಒಳಗಾಗಿ ಸಂಘದ ಉಪವಿಧಿಯನ್ನು ಸಹಕಾರ ಸಂಘವು ತಿದ್ದುಪಡಿ ಮಾಡಿಕೊಳ್ಳಬೇಕು.
2. ಇನ್ನು ಮುಂದೆ 'ಕಮಿಟಿ' ಅನ್ನು 'ಮಂಡಲಿ' ಎಂದು ಕರೆಯಲಾಗುತ್ತದೆ.
3. ಸಂಘದ ಅಥವಾ ಅದಕ್ಕೆ ಹಣಕಾಸು ಒದಗಿಸುವ ಬ್ಯಾಂಕಿನಿಂದ ಸಂಬಳ ಪಡೆಯುವ ಉದ್ಯೋಗಿಯಾಗಿದ್ದರೆ ಅಥವಾ ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಲಾದ ಕನಿಷ್ಠ ವ್ಯವಹಾರ ಮಾಡಿರದಿದ್ದರೆ ಅಂತಹ ಸದಸ್ಯನು ಸದಸ್ಯನಾಗಿ ಮುಂದುವರೆಯಲು ಅನರ್ಹನಾಗುತ್ತಾನೆ.
4. ಅಪೆಕ್ಸ್ ಸಹಕಾರಿ ಲೆಕ್ಕಪರಿಶೋಧನಾ ವರದಿಯನ್ನು ವಿಧಾನ ಮಂಡಲದಲ್ಲಿ ಮಂಡಿಸಬೇಕಾಗುತ್ತದೆ.

ಗಮನಿಸಿ: ಅಪೆಕ್ಸ್ ಸಹಕಾರಿ ಸಂಘ ಎಂದರೆ ಸಹಕಾರಿ ಸಂಘಗಳಿಗೆ ಮಾತ್ರ ಸದಸ್ಯತ್ವ ಮತ್ತು ಸಂಘಗಳ ಪ್ರವೇಶವಿರುವ ಮತ್ತು ಇಡೀ ರಾಜ್ಯದ ಕಾರ್ಯಕ್ಷೇತ್ರವನ್ನುಳ್ಳ ಸಹಕಾರಿ ಸಂಘ.

5. ಸದಸ್ಯರಿಗೆ ಅವನಿಗೆ ಸಂಬಂಧಪಟ್ಟ ಯಾವುದೇ ದಾಖಲೆಗಳನ್ನು ಕಛೇರಿ ವೇಳೆಯಲ್ಲಿ ನೋಡಲು ಮತ್ತು ನಿಗದಿತ ಶುಲ್ಕ ಸಂದಾಯ ಮಾಡಿದ ತರುವಾಯ ಪಡೆಯಲು ಅವಕಾಶ ಮಾಡಲಾಗಿದೆ.
6. ಐದು ಸಾಮಾನ್ಯ ಸಭೆಗಳಲ್ಲಿ ಕನಿಷ್ಠ ಮೂರು ಸಭೆಗಳಿಗೆ ಹಾಜರಾಗದಿದ್ದರೆ ಅಂತಹ ಸದಸ್ಯನಿಗೆ ಮತದಾನದ ಹಕ್ಕು ಇರುವುದಿಲ್ಲ.
7. ಪ್ರಾತಿನಿಧಿಕ ಸಾಮಾನ್ಯ ನಿಕಾಯ ರಚಿಸಲು ಉಪವಿಧಿ ತಿದ್ದುಪಡಿ ಅಧಿಕಾರವನ್ನು ನಿಬಂಧಕರ ಬದಲು ಸಾಮಾನ್ಯ ಸಭೆಗೆ ನೀಡಿದೆ.
8. ಪ್ರತಿವರ್ಷ ಸಾಮಾನ್ಯ ಸಭೆಯನ್ನು ಸೆಪ್ಟಂಬರ್ 30ರ ಬದಲು ಸೆಪ್ಟಂಬರ್ 25ರೊಳಗೆ ನಡೆಸಬೇಕಿರುತ್ತದೆ. ಸಾಮಾನ್ಯ ಸಭೆ ನಡೆಸಲು ಹೆಚ್ಚುವರಿ ಕಾಲಾವಕಾಶ ನೀಡಲು ಹಾಗೂ ಮುಂದೂಡಲು ಅವಕಾಶ ಇರುವುದಿಲ್ಲ.
9. ಸಾಮಾನ್ಯ ಸಭೆಗೆ ಹೆಚ್ಚುವರಿ ಅಧಿಕಾರಗಳನ್ನು ನೀಡಲಾಗಿದೆ. ಅವುಗಳೆಂದರೆ, ಆಂತರಿಕ ಲೆಕ್ಕಪರಿಶೋಧಕರ ನೇಮಕ, ನಿರ್ದೇಶಕರ ಮತ್ತು ಸಂಬಂಧಿಗಳ ಸಾಲಗಳ ಕುರಿತು, ಸಾಲ ಸುಸ್ತಿಯಾಗಿದ್ದಲ್ಲಿ ಅವುಗಳ ಕುರಿತು, ಸೇವೆಯಿಂದ ತೆಗೆದು ಹಾಕಿದ ನೌಕರನ ಅಪೀಲಿನ ಪರಿಗಣನೆ ಇತ್ಯಾದಿ.
10. ನಿಬಂಧಕರ ನ್ಯಾಯಾಲಯದಲ್ಲಿ ವ್ಯಾಜ್ಯ ಹೂಡುವ ಸಂದರ್ಭದಲ್ಲಿ ವಕೀಲರ ಸೇವೆ ಪಡೆಯಲು ನಿಬಂಧಕರ ಅನುಮತಿ ಪಡೆಯಬೇಕೆಂಬ ಪ್ರಾವಧಾನವನ್ನು ತೆಗೆದುಹಾಕಲಾಗಿದೆ.
11. ಚುನಾವಣೆಗೆ ಸಂಬಂಧಿಸಿದ ವಿವಾದವನ್ನು ನಿಬಂಧಕರ ಬದಲು ಸಿವಿಲ್ ನ್ಯಾಯಾಲಯದ ವ್ಯಾಪ್ತಿಗೆ ತರಲಾಗಿದೆ.
12. ಹಿಂದಿನ ವರ್ಷದ ವರದಿ, ಸಾಮಾನ್ಯ ಸಭೆ ಮತ್ತು ಚುನಾವಣೆ ನಡೆಸಿದ ಕುರಿತು ಘೋಷಣೆ, ಲೆಕ್ಕಪರಿಶೋಧನಾ ವರದಿ, ಲಾಭ ವಿಲೇವಾರಿ, ಉಪವಿಧಿ ತಿದ್ದುಪಡಿ ಪಟ್ಟಿ, ಹಣದ ದುರುಪಯೋಗ ಅಥವಾ ದುರ್ವಿನಿಯೋಗ ಕುರಿತು ಕೈಗೊಂಡ ಕ್ರಮಗಳು ವರದಿಗಳನ್ನು ನಿಬಂಧಕರಿಗೆ ಸೆಪ್ಟಂಬರ್ 30ರೊಳಗೆ ಸಲ್ಲಿಸತಕ್ಕದ್ದು. ಮಾಹಿತಿ ಸಲ್ಲಿಸದಿದ್ದಲ್ಲಿ ಸಹಕಾರಿಯ ನಿರ್ದೇಶಕರು ಅನರ್ಹತೆಗೆ ಗುರಿಯಾಗುತ್ತಾರೆ.
13. ಶೇ.20ರಷ್ಟು ಅರ್ಹ ಸದಸ್ಯರು ಕೋರಿಕೆ ಸಲ್ಲಿಸಿದಲ್ಲಿ ವಿಶೇಷ ಸಾಮಾನ್ಯ ಸಭೆ ಕರೆಯಬೇಕು.(50 ಸದಸ್ಯರ ಕೋರಿಕೆ ಮೇರೆಗೆ ಕರೆಯುವ ಪ್ರಾವಧಾನ ಕೈಬಿಟ್ಟಿದೆ.)
14. ಸರ್ಕಾರದ ಸಹಾಯಧನ ಇರುವ ಸಂಘದಲ್ಲಿ (ಪ್ರಾಥಮಿಕ ಕೃಷಿ ಪತ್ತಿನ ಸಂಘ ಹೊರತುಪಡಿಸಿ) ಮಾತ್ರ ಓರ್ವ ಸರ್ಕಾರದ ನಾಮನಿರ್ದೇಶನ ಮಾಡಲು ಪ್ರಾವಧಾನವನ್ನು ಮಾಡಿದ್ದು, ಇತರೆ ಸಂಘಗಳಲ್ಲಿ ಇದನ್ನು ಬಿಟ್ಟುಬಿಡಲಾಗಿದೆ.

ಆಡಳಿತ ಮಂಡಲಿ ವಿಷಯಗಳು

1. ಪ್ರಾಥಮಿಕ ಮತ್ತು ಮಧ್ಯಮಿಕ ಸಂಘಗಳ ಮಂಡಲಿ ಸದಸ್ಯರ ಸಂಖ್ಯೆಯನ್ನು ಕನಿಷ್ಠ ಹನ್ನೊಂದು ಎಂದು ನಿಗದಿಗೊಳಿಸಿದ್ದು, ಮತ್ತು ಗರಿಷ್ಠ ಮಿತಿಯನ್ನು ಕಾರ್ಯಕ್ಷೇತ್ರಕ್ಕೆ ಅನುಗುಣವಾಗಿ ಈ ಕೆಳಗಿನಂತೆ ನಿಗದಿಪಡಿಸಿದೆ.

ತಾಲೂಕು ಮಟ್ಟಕ್ಕಿಂತ ಕೆಳಗಿನ ಎಲ್ಲ ಸಹಕಾರಿಗಳು	ಹನ್ನೊಂದು
ತಾಲ್ಲೂಕು ಮಟ್ಟದ ಎಲ್ಲ ಸಹಕಾರಿಗಳು	ಹದಿಮೂರು
ತಾಲ್ಲೂಕು ವ್ಯಾಪ್ತಿ ಮೀರಿದ ಆದರೆ ಜಿಲ್ಲಾ ಮಟ್ಟ ಮೀರದ ಸಹಕಾರಿಗಳು	ಹದಿನೈದು
ತಾಲ್ಲೂಕು ವ್ಯಾಪ್ತಿ ಮೀರಿದ ಆದರೆ ಜಿಲ್ಲಾ ಮಟ್ಟ ಮೀರದ ಸಹಕಾರಿ ಬ್ಯಾಂಕುಗಳು	ಹದಿನೇಳು
ಜಿಲ್ಲಾ ವ್ಯಾಪ್ತಿ ಮೀರಿದ ಎಲ್ಲ ಸಹಕಾರಿಗಳು	ಹತ್ತೊಂಬತ್ತು

2. ಆಡಳಿತ ಮಂಡಲಿಯಲ್ಲಿ ಮಿಸಲಾತಿ ನಿಗದಿಪಡಿಸಿದ್ದು, ಪರಿಶಿಷ್ಟ ಜಾತಿ ಅಥವಾ ಪಂಗಡಕ್ಕೆ ಒಂದು ಸ್ಥಾನ, ಹಿಂದುಳಿದ ವರ್ಗದವರಿಗೆ ಎರಡು ಸ್ಥಾನ ಮತ್ತು ಮಹಿಳೆಯರಿಗೆ ಎರಡು ಸ್ಥಾನವನ್ನು ಮೀಸಲಿಡಲಾಗಿದೆ. ಚುನವಣೆಯ ಸಂದರ್ಭದಲ್ಲಿ ಆ ವರ್ಗದ ಸದಸ್ಯರಿದ್ದಲ್ಲಿ ಮೇಲಿನ ಮೀಸಲಾತಿ ಅನ್ವಯಿಸುತ್ತದೆ. ಬಿಡಿ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಹೊಂದಿರುವ ಸಹಕಾರಿಗಳಿಗೆ ಮಾತ್ರ ಮೀಸಲಾತಿ ಅನ್ವಯಿಸುತ್ತದೆ.
3. ಆಡಳಿತ ಮಂಡಲಿಗೆ ಬ್ಯಾಂಕಿಂಗ್, ವ್ಯವಸ್ಥಾಪನೆ ಅಥವಾ ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಇಬ್ಬರು ತಜ್ಞರನ್ನು ಸದಸ್ಯರನ್ನಾಗಿ ಸಹ ಆಯ್ಕೆ ಮೂಲಕ ಸೇರಿಸಿಕೊಳ್ಳಬೇಕು. ಆದರೆ

ಅಂತಹ ಸದಸ್ಯರಿಗೆ ಚುನಾವಣೆಯಲ್ಲಿ ಮತದಾನದ ಅಥವಾ ಪದಾಧಿಕಾರಿಯಾಗುವ ಹಕ್ಕು ಇರುವುದಿಲ್ಲ.

4. ಆಡಳಿತ ಮಂಡಲಿಯ ಅವಧಿ ಚುನಾವಣೆಯ ದಿನಾಂಕದಿಂದ ಐದು ವರ್ಷಗಳಾಗಲಿದೆ. ಇದುವರೆಗಿನ ಸಹಕಾರ ವರ್ಷದ ಮಧ್ಯಭಾಗದಲ್ಲಿ ಚುನಾವಣೆ ನಡೆದರೆ ಉಳಿದ ಅವಧಿಯನ್ನು ಒಂದು ಪೂರ್ಣವರ್ಷವೆಂದು ಪರಿಗಣಿಸುವುದು ಕೈಬಿಡಲಾಗಿದೆ.
5. ಪದಾಧಿಕಾರಿಗಳ ಅವಧಿ ಕೂಡಾ ಇನ್ನು ಮುಂದೆ ಎರಡೂವರೆ ವರ್ಷಗಳ ಬದಲು ಐದು ವರ್ಷಗಳಾಗಲಿದೆ.

ಚುನಾವಣೆ ಸಂಬಂಧಿತ ವಿಷಯಗಳು

1. ಇದುವರೆಗೆ ಸಹಕಾರಿಯ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನಿಬಂಧಕರು ನೇಮಕ ಮಾಡುತ್ತಿದ್ದರು. ಪ್ರಸ್ತುತ ಸಹಕಾರಿ ಚುನಾವಣಾ ಆಯೋಗ ರಚಿಸಲಾಗುತ್ತಿದ್ದು, ಪದಾಧಿಕಾರಿಗಳ ಚುನಾವಣೆಯೂ ಸೇರಿದಂತೆ ಸಹಕಾರಿಯ ಎಲ್ಲಾ ರೀತಿಯ ಚುನಾವಣೆಯನ್ನು ನಡೆಸುವ ಸಂಪೂರ್ಣ ಉಸ್ತುವಾರಿ (ಮತದಾರರ ಪಟ್ಟಿ ತಯಾರಿಸುವುದೂ ಸೇರಿದಂತೆ) ಯನ್ನು ಚುನಾವಣಾ ಆಯೋಗಕ್ಕೆ ನೀಡಿದೆ.
2. ಮುಖ್ಯಮಂತ್ರಿಯವರ ಶಿಫಾರಸ್ಸಿನ ಮೇರೆಗೆ ಮಾನ್ಯ ರಾಜ್ಯಪಾಲರು ಪ್ರಧಾನ ಕಾರ್ಯದರ್ಶಿ ದರ್ಜೆಯ ಅಧಿಕಾರಿಯನ್ನು ಚುನಾವಣಾ ಆಯೋಗಕ್ಕೆ ಚುನಾವಣಾ ಆಯುಕ್ತರನ್ನಾಗಿ ನೇಮಕ ಮಾಡುತ್ತಾರೆ. ಮತ್ತು ಸಹಕಾರಿಗಳ ಅಪರ ನಿಬಂಧಕರ ದರ್ಜೆಯ ಅಧಿಕಾರಿಯು ಆಯೋಗದ ಕಾರ್ಯದರ್ಶಿಯಾಗುತ್ತಾರೆ. ಚುನಾವಣಾ ಆಯುಕ್ತರ ಪದಾವಧಿಯು ಐದು ವರ್ಷಗಳಾಗಿರುತ್ತದೆ.
3. ಕಾಯ್ದೆ ತಿದ್ದುಪಡಿಯ ನಂತರ ಚುನಾವಣಾ ಆಯೋಗದ ರಚನೆಯಾಗಿ ಚಟುವಟಿಕೆ ಆರಂಭಿಸಲು ಕಾಲಾವಕಾಶ ಅಗತ್ಯವಿರುವ ಕಾರಣ, 2013ರ ಮಾರ್ಚ್ ತಿಂಗಳಿನಲ್ಲಿ ನಡೆಯಬೇಕಿರುವ ಚುನಾವಣೆಗಳನ್ನು ಮುಂದೂಡಿದೆ. ಪ್ರಾಥಮಿಕ ಸಹಕಾರಿಗಳ ಚುನಾವಣೆಗಳನ್ನು 30.09.2013 ರೊಳಗೆ, ಮಾಧ್ಯಮಿಕ ಸಹಕಾರಿಗಳ ಚುನಾವಣೆಗಳನ್ನು 31.10.2013 ರೊಳಗೆ ಒಕ್ಕೂಟ ಸಹಕಾರಿಯ ಚುನಾವಣೆಗಳನ್ನು 30.11.2013ರೊಳಗೆ ನಡೆಸಬೇಕಿರುತ್ತದೆ. ಚುನಾವಣೆಯವರೆಗೆ ಈಗಿರುವ ಆಡಳಿತ ಮಂಡಳಿಯೇ ಮುಂದುವರೆಯುವಂತೆ ಪ್ರಾವಧಾನ ಮಾಡಿದೆ.
4. ಆಡಳಿತ ಮಂಡಲಿಯಲ್ಲಿ ಆಕಸ್ಮಿಕ ರಿಕ್ತತೆ ಉಂಟಾದಲ್ಲಿ, ಮೊದಲ ಎರಡೂವರೆ ವರ್ಷಗಳ ಅವಧಿಯಲ್ಲಿ, ರಿಕ್ತತೆಯನ್ನು ಅರವತ್ತು ದಿನಗಳೊಳಗೆ ಚುನಾವಣೆಯ ಮೂಲಕ ತುಂಬಬೇಕು. ಮಂಡಲಿಯ ಅವಧಿಯು ಎರಡೂವರೆ ವರ್ಷಗಳಿಗಿಂತ ಕಡಿಮೆ ಇದ್ದಲ್ಲಿ ಮತ್ತು ಕೋರಂಗೆ ಅಗತ್ಯ ಸಂಖ್ಯೆ ಇದ್ದಲ್ಲಿ ಸಹ ಆಯ್ಕೆ ಮೂಲಕ ತುಂಬಬಹುದು.
5. ಮಂಡಲಿಯ ಅಧಿಕಾರ ಮತ್ತು ಪ್ರಕಾರ್ಯಗಳನ್ನು ನಿರ್ದಿಷ್ಟಪಡಿಸಲಾಗಿದೆ.
6. ನಿರ್ದೇಶಕರಿಗೆ ಹೆಚ್ಚುವರಿ ಅನರ್ಹತೆಗಳನ್ನು ನಿಗದಿಪಡಿಸಿದೆ. ಅವೆಂದರೆ ಚುನಾವಣೆ ನಡೆಸಲು ಅಗತ್ಯ ನೆರವು ನಿಡದಿದ್ದಲ್ಲಿ, ಸಾಮಾನ್ಯ ಸಭೆ ನಡೆಸದಿದ್ದಲ್ಲಿ, ಸಾಮಾನ್ಯ ಸಭೆಯಲ್ಲಿ ಲೆಕ್ಕಪರಿಶೋಧನಾ ವರದಿ ಮಂಡಿಸದಿದ್ದಲ್ಲಿ ಅನರ್ಹರಾಗುತ್ತಾರೆ. ಮತ್ತು ಯಾವುದೇ ಅನರ್ಹತೆಗೆ ಗುರಿಯಾದ ನಿರ್ದೇಶಕರು ಐದು ವರ್ಷಗಳವರೆಗೆ ಒಂದು ಸಂಘದ ನಿರ್ದೇಶಕರಾಗಿ ಆಯ್ಕೆಯಾಗಲು ಅಥವಾ ಮುಂದುವರೆಯಲು ಅನರ್ಹರಾಗುತ್ತಾರೆ.
7. ಮುಖ್ಯಕಾರ್ಯನಿರ್ವಾಹಕನು ಆಡಳಿತ ಮಂಡಲಿಯ ಪದನಿಮಿತ್ತ ನಿರ್ದೇಶಕನಾಗಿರುತ್ತಾನೆ. ಆದರೆ ಪದಾಧಿಕಾರಿಗಳ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿರುವುದಿಲ್ಲ.
8. ಮಂಡಲಿಯಲ್ಲಿ ರಿಕ್ತತೆ ಉಂಟಾದಲ್ಲಿ ಚುನಾವಣೆ ನಡೆಸಲು ಚುನಾವಣಾ ಆಯೋಗಕ್ಕೆ ತಿಳಿಸುವುದು ಮುಖ್ಯಕಾರ್ಯನಿವಾಹಕನ ಜವಾಬ್ದಾರಿ.
9. ಇದುವರೆಗೆ ಸಭೆಗೆ ಅಗತ್ಯ ಕೋರಂ ಅನ್ನು ಉಪವಿಧಿಯಲ್ಲಿ ನಿಗದಿಪಡಿಸಲಾಗುತ್ತಿತ್ತು. ಪ್ರಸ್ತುತ ಕಾಯ್ದೆಯಲ್ಲಿ ಸಾಮಾನ್ಯ ಸಭೆಗೆ ಶೇ.20, ಪ್ರಾತಿನಿಧಿಕ ಸಾಮಾನ್ಯ ಸಭೆಗೆ ಶೇ.60 ಮತ್ತು ಆಡಳಿತ ಮಂಡಲಿ ಸಭೆಗೆ ಶೇ. 50ಕ್ಕಿಂತ ಹೆಚ್ಚು ಎಂದು ಕಾಯ್ದೆಯಲ್ಲಿ ನಿಗದಿಪಡಿಸಿದೆ.

ಲೆಕ್ಕಪರಿಶೋಧನೆಯ ವಿಷಯ

1. ಲೆಕ್ಕಪರಿಶೋಧಕರ ಪಟ್ಟಿ ತಯಾರಿಸುವ ಜವಾಬ್ದಾರಿಯನ್ನು ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ನೀಡಲಾಗಿದೆ.
2. ಲೆಕ್ಕಪರಿಶೋಧನಾ ನಿರ್ದೇಶಕನು ಪ್ರತಿ ವರ್ಷ ಏಪ್ರಿಲ್ 30ರೊಳಗೆ ಪ್ರತಿ ಸಹಕಾರಿಗೆ ಗರಿಷ್ಠ 10ಕ್ಕೆ ಲೆಕ್ಕಪರಿಶೋಧಕರ ಪಟ್ಟಿಯನ್ನು ಕಳುಹಿಸುವರು. ಆ ಪಟ್ಟಿಯಿಂದ ಒಬ್ಬರನ್ನು ಸಾಮಾನ್ಯ ಸಭೆಯು ನೇಮಕ ಮಾಡಬೇಕು ಮತ್ತು ಲೆಕ್ಕಪರಿಶೋಧಕರ ಶುಲ್ಕವನ್ನು ಸಾಮಾನ್ಯ ಸಭೆಯು ನಿರ್ಧರಿಸಬೇಕು.
3. ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ ಅಧಿಕಾರಿಗಳನ್ನು ಮತ್ತು ಸನ್ನದು ಲೆಕ್ಕಪರಿಶೋಧಕರನ್ನು ಮತ್ತು ಸನ್ನದು ಲೆಕ್ಕಪರಿಶೋಧಕರ ಸಂಸ್ಥೆಗಳನ್ನು 'ಲೆಕ್ಕಪರಿಶೋಧಕರು' ಎಂದು ಕಾಯ್ದೆಯು ಪರಿಗಣಿಸಿದೆ.
4. ಲೆಕ್ಕಪರಿಶೋಧನೆಯನ್ನು ಪ್ರತಿವರ್ಷ ಸೆಪ್ಟೆಂಬರ್ ಒಂದನೇ ದಿನಾಂಕದೊಳಗೆ ಮುಕ್ತಾಯಗೊಳಿಸತಕ್ಕದ್ದು. ಮತ್ತು ವರದಿಯನ್ನು ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಮತ್ತು ನಿಬಂಧಕರಿಗೆ ಕಳುಹಿಸತಕ್ಕದ್ದು. ಅಲ್ಲದೇ ಸಹಕಾರಿಯು ಯಾವುದಾದರೂ ಸಂಸ್ಥೆಯಿಂದ ಸಾಲ ಪಡೆದಿದ್ದಲ್ಲಿ ಅಂತಹ ಸಂಸ್ಥೆಗೆ ಕೂಡಾ ನೀಡಬೇಕು.
5. ಸಾಮಾನ್ಯ ಸಭೆಯ ದಿನಾಂಕದಿಂದ ಮುವತ್ತು ದಿನಗಳೊಳಗೆ ಲೆಕ್ಕಪರಿಶೋಧನಾ ವರದಿಯಲ್ಲಿ ಹೇಳಿದ ನ್ಯೂನತೆಗಳ ಕುರಿತು ತೆಗೆದುಕೊಂಡ ಕ್ರಮಗಳನ್ನು ನಿಬಂಧಕರಿಗೆ ಕಳುಹಿಸಬೇಕು.
6. ಲೆಕ್ಕಪರಿಶೋಧನಾ ವರದಿಯು ಸಮರ್ಪಕವಾಗಿಲ್ಲವೆಂದು ನಿರ್ಣಯಿಸಿ ಮರುಲೆಕ್ಕಪರಿಶೋಧನೆಗೆ ನಿರ್ಣಯಿಸುವ ಅಧಿಕಾರವನ್ನು ಸಾಮಾನ್ಯ ಸಭೆಗೆ ನೀಡಿದೆ. ಮತ್ತು ರಾಜ್ಯ ಸರ್ಕಾರವು ಕೂಡ ಮರುಲೆಕ್ಕಪರಿಶೋಧನೆಗೆ ಆದೇಶಿಸಬಹುದು.
7. ಸಂಘವು ಸಾಲ ಪಡೆಯಲು ನಿಬಂಧಕರ ಅನುಮತಿ ಪಡೆಯುವ ಪ್ರಾವಧಾನವನ್ನು ಕೈಬಿಟ್ಟಿದ್ದು, ಸಾಮಾನ್ಯ ಸಭೆಯು ಸಾಲ ಪಡೆಯುವ ಮಿತಿಯನ್ನು ನಿಗದಿಪಡಿಸಬೇಕು.

19ನೇ ಪುಟಕ್ಕೆ...

ನೂತನ ಚೆಕ್ ವ್ಯವಸ್ಥೆ - ಸಿಟಿಎಸ್ ಬಗ್ಗೆ ಮಾಹಿತಿ

▶▶ ಆರ್ನಂದನ್, ಯಲ್ಲಾಪುರ.



ಚೆಕ್‌ನ ಗುಣಮಟ್ಟ ಎಂದರೆ ಚೆಕ್ ಹಾಳೆಯ ಅಳತೆ, ಗಾತ್ರ, ಎಂಐಸಿಆರ್ ಬ್ಯಾಂಡ್, ಗುಣಮಟ್ಟದ ಕಾಗದ ಮುಂತಾದವುಗಳನ್ನು ಒಳಗೊಂಡಿರುತ್ತದೆ. ಸದ್ಯ ವಿವಿಧ ಬ್ಯಾಂಕುಗಳು ತಮ್ಮದೇ ಆದ ರೀತಿಯ ಗುಣಮಟ್ಟದ ವಿವಿಧ ಚೆಕ್‌ಗಳನ್ನು ಹೊಂದಿವೆ. ಹೊಸದಾಗಿ ಬಳಕೆಗೆ ತರುತ್ತಿರುವ ಸಿಟಿಎಸ್ ಗುಣಮಟ್ಟದ ಚೆಕ್‌ಗಳು ಏಕರೂಪದ ಕಾಗದ, ವಾಟರ್ ಮಾರ್ಕ್, ಭದ್ರತಾ ಚಿಹ್ನೆಗಳನ್ನು ಒಳಗೊಂಡಿರುತ್ತವೆ. ಇವುಗಳಲ್ಲಿ ಎಲೆಕ್ಟ್ರಾನಿಕ್ ಮುದ್ರಿತ ಚಿತ್ರ ಇರುತ್ತದೆ.

ಪ್ರಪಂಚದ ಎಲ್ಲ ಕ್ಷೇತ್ರಗಳು ಆಧುನಿಕತೆಯೆಡೆಗೆ, ಹೊಸ ತಂತ್ರಜ್ಞಾನಗಳೆಡೆಗೆ ನಡೆಯುತ್ತಿರುವಾಗ, ಆಧುನಿಕತೆಯನ್ನು ಅಳವಡಿಸಿಕೊಳ್ಳುವುದರಲ್ಲಿ ಸದಾ ಮುಂದಿರುವ ವಿಶ್ವದ ಅತಿ ದೊಡ್ಡ ಹಾಗೂ ಸುರಕ್ಷಿತ ಬ್ಯಾಂಕಿಂಗ್ ಕ್ಷೇತ್ರ ಹೊಂದಿರುವ ಭಾರತದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಗ್ರಾಹಕ ಸ್ನೇಹಿ ಬದಲಾವಣೆಯೊಂದನ್ನು ತರಲಾಗುತ್ತಿದೆ. ಏಪ್ರಿಲ್ 01, 2013ರಿಂದ ಬ್ಯಾಂಕಿಂಗ್ ಹಾಗೂ ಹಣಕಾಸು ವಹಿವಾಟುಗಳಲ್ಲಿ ಹೊಸ ಮಾದರಿ ಚೆಕ್ ಬಳಕೆಗೆ ಬರಲಿದೆ. ಚೆಕ್ ವಹಿವಾಟಿನಲ್ಲಿ ಅನುಸರಿಸುತ್ತಿದ್ದ ಸಾಂಪ್ರದಾಯಿಕ ಮಾದರಿ ಬದಲಾಗಲಿದೆ. ಚೆಕ್‌ಗಳು ಹಣವಾಗಿ ಪರಿವರ್ತಿತಗೊಳ್ಳಲು 2-3 ದಿನಗಳ ಕಾಲಾವಕಾಶವನ್ನು ಪಡೆಯುತ್ತಿರುವುದು ಬ್ಯಾಂಕ್ ಗ್ರಾಹಕರಿಗೆ ತಿಳಿದಿರುವ ವಿಷಯ. ಇದುವರೆಗೆ ನಗದೀಕರಣದ ಸಲುವಾಗಿ ಚೆಕ್‌ಗಳು ಭೌತಿಕ ರೂಪದಲ್ಲಿ ಕ್ಲೀಯರೆನ್ಸ್ ಹೌಸ್‌ಗೆ ಸಂಚರಿಸಬೇಕಿತ್ತು. ಇದು ನಗದೀಕರಣದ ವಿಳಂಬಕ್ಕೆ ಕಾರಣವಾಗಿತ್ತು. ಆದರೆ ಈಗ ಜಾರಿಗೆ ಬರುತ್ತಿರುವ ಚೆಕ್ ಟ್ರಂಕೇಷನ್ ಸಿಸ್ಟಮ್ – ಸಿಟಿಎಸ್ ನಲ್ಲಿ ಭೌತಿಕ ರೂಪದ ಚೆಕ್ ರವಾನೆಯನ್ನು ನಿಲ್ಲಿಸಲಾಗುತ್ತಿದೆ. ವಿದ್ಯುನ್ಮಾನ ತಂತ್ರಜ್ಞಾನವನ್ನು ಬಳಸಿಕೊಂಡು ದತ್ತಾಂಶವನ್ನು ರವಾನೆ ಮಾಡುವ ತಂತ್ರಜ್ಞಾನದ ಮೂಲಕ ಚೆಕ್ ನಗದೀಕರಣವನ್ನು ಕ್ಷಿಪ್ರಗೊಳಿಸಲಾಗುತ್ತಿದೆ. ಸಿಟಿಎಸ್ ಎಂಬ ತಂತ್ರಜ್ಞಾನ ಆಧಾರಿತ ನೂತನ ಚೆಕ್ ವ್ಯವಸ್ಥೆಯ ಕಿರು ಪರಿಚಯ ಈ ಲೇಖನದ ಉದ್ದೇಶ.

ಭೌತಿಕ ರೂಪದ ಚೆಕ್ ನಗದೀಕರಣ ಬಳಕೆ ರದ್ದುಗೊಳಿಸಿ ಅದರ ಬದಲಿಗೆ ಹೆಚ್ಚು ಸುರಕ್ಷಿತವಾದ ಏಕರೂಪ ಭದ್ರತಾ ಅಂಶಗಳಿರುವ ಸಿಟಿಎಸ್-2010 ಮಾದರಿ ಚೆಕ್‌ಗಳ ಬಳಕೆ ಜಾರಿಗೆ ತರುವುದೇ ಚೆಕ್ ಟ್ರಂಕೇಷನ್ ವ್ಯವಸ್ಥೆ. ಈ ಸೌಲಭ್ಯದ ಮೂಲಕ ಅಂತರ್ ಬ್ಯಾಂಕ್ ನಗದು ಪಾವತಿ ತ್ವರಿತವಾಗಿ ನಡೆಯುತ್ತದೆ. ಬ್ಯಾಂಕ್ ಪಾವತಿ ವ್ಯವಸ್ಥೆಯಲ್ಲಿ ಹೆಚ್ಚು ಸುರಕ್ಷತೆ ಮತ್ತು ಪಾರದರ್ಶಕತೆ ತರಲು ಭಾರತೀಯ ರಿಸರ್ವ್ ಬ್ಯಾಂಕ್ ಈ ವ್ಯವಸ್ಥೆಯನ್ನು ಜಾರಿಗೆ ತರುತ್ತಿದೆ. ಆರ್‌ಬಿಐ 2008 ಜನವರಿಯಂದು ದೆಹಲಿ ಮತ್ತು 2011 ಸೆಪ್ಟೆಂಬರ್ ರಂದು ಚೆನ್ನೈ ನಗರದಲ್ಲಿ ಈ ಯೋಜನೆಯನ್ನು ಪ್ರಾಯೋಗಿಕವಾಗಿ ಜಾರಿಗೆ ತಂದಿದೆ. ರಾಷ್ಟ್ರೀಯ ಪಾವತಿ ಸಂಸ್ಥೆ ಈ ವ್ಯವಸ್ಥೆಯ ನಿರ್ವಹಣೆ ಮಾಡುತ್ತದೆ. ಈಗಿರುವ ಸಾಂಪ್ರದಾಯಿಕ ಚೆಕ್ ಇತ್ಯರ್ಥ ವ್ಯವಸ್ಥೆಗೆ ಅಮೂಲಾಗ್ರ ಬದಲಾವಣೆ ತರುವುದು ಇದರ ಮುಖ್ಯ ಉದ್ದೇಶ ಎಂದು ಹೇಳಲಾಗುತ್ತಿದೆ. ಸಾಮಾನ್ಯವಾಗಿ ಚೆಕ್ ಇತ್ಯರ್ಥಕ್ಕೆ ವಲಯವಾರು ಜಾಲಗಳ ಮೇಲೆ ಬೀಳುತ್ತಿದ್ದ ಒತ್ತಡ ಕಡಿಮೆ ಆಗಿ ಬ್ಯಾಂಕ್ ಶಾಖೆಗೆ ಹೆಚ್ಚಿನ ಸ್ವಾತಂತ್ರ್ಯ ಸಿಗುವುದರಿಂದ ಚೆಕ್ ಇತ್ಯರ್ಥ ತ್ವರಿತವಾಗಿ ಆಗುತ್ತದೆ.

ಚೆಕ್‌ನ ಗುಣಮಟ್ಟ ಎಂದರೆ ಚೆಕ್ ಹಾಳೆಯ ಅಳತೆ, ಗಾತ್ರ, ಎಂಐಸಿಆರ್ ಬ್ಯಾಂಡ್, ಗುಣಮಟ್ಟದ ಕಾಗದ ಮುಂತಾದವುಗಳನ್ನು ಒಳಗೊಂಡಿರುತ್ತದೆ. ಸದ್ಯ ವಿವಿಧ ಬ್ಯಾಂಕುಗಳು ತಮ್ಮದೇ ಆದ ರೀತಿಯ ಗುಣಮಟ್ಟದ ವಿವಿಧ ಚೆಕ್‌ಗಳನ್ನು ಹೊಂದಿವೆ. ಹೊಸದಾಗಿ ಬಳಕೆಗೆ ತರುತ್ತಿರುವ ಸಿಟಿಎಸ್ ಗುಣಮಟ್ಟದ ಚೆಕ್‌ಗಳು ಏಕರೂಪದ ಕಾಗದ, ವಾಟರ್ ಮಾರ್ಕ್, ಭದ್ರತಾ ಚಿಹ್ನೆಗಳನ್ನು ಒಳಗೊಂಡಿರುತ್ತವೆ. ಇವುಗಳಲ್ಲಿ ಎಲೆಕ್ಟ್ರಾನಿಕ್ ಮುದ್ರಿತ ಚಿತ್ರ ಇರುತ್ತದೆ. ಇದರ ಜೊತೆಗೆ ಎಂಐಸಿಆರ್ ದತ್ತಾಂಶ ಸೇರಿದಂತೆ ಚೆಕ್‌ನಲ್ಲಿ ಇರಬೇಕಾದ ಮಾಹಿತಿಗಳನ್ನು ಸಂಕ್ಷಿಪ್ತಗೊಳಿಸಿ ಅತ್ಯಂತ ಸುರಕ್ಷಿತ ವಿಧಾನದಲ್ಲಿ ಚೆಕ್ ಇತ್ಯರ್ಥಗೊಳ್ಳಬೇಕಾದ ಬ್ಯಾಂಕ್ ಶಾಖೆಗಳಿಗೆ ವರ್ಗಾಯಿಸಲಾಗುತ್ತದೆ. ದತ್ತಾಂಶಗಳು ಗೂಢ ಲಿಪಿಯಲ್ಲಿರುವ ಕಾರಣ ನಕಲು ಮಾಡುವುದು ದುರ್ಬಳಕೆ ಮಾಡುವುದು ಅಸಾಧ್ಯ. ಈ ಸಿಟಿಎಸ್ 2010 ಚೆಕ್‌ಗಳನ್ನು ರೂಪಿಸುವುದರಲ್ಲಿ ಹಾಗೂ ಅವುಗಳನ್ನು ಹಂತಹಂತವಾಗಿ ಜಾರಿಗೆ ತರಲು ಭಾರತೀಯ ಬ್ಯಾಂಕುಗಳ ಸಂಘ (ಐಬಿಎ), ಹಾಗೂ ರಾಷ್ಟ್ರೀಯ ಪಾವತಿಗಳ ಭಾರತೀಯ ಸಂಸ್ಥೆ (ಎನ್‌ಪಿಸಿಐ) ಜೊತೆಗೂಡಿ ಕಾರ್ಯನಿರ್ವಹಿಸುತ್ತಿವೆ. ಅದರಲ್ಲೂ ಎನ್‌ಪಿಸಿಐ ಚೆಕ್‌ಗಳನ್ನು ಪರೀಕ್ಷಿಸಿ ಪ್ರಮಾಣೀಕರಿಸುತ್ತದೆ. ಇದು ಪ್ರಮಾಣೀಕರಿಸಿದ ಚೆಕ್‌ಗಳನ್ನಷ್ಟೆ ಬ್ಯಾಂಕುಗಳು ತಮ್ಮ ಗ್ರಾಹಕರಿಗೆ ನೀಡಬೇಕಾಗುತ್ತದೆ.

ಗ್ರಾಹಕರಿಗೆ, ಬ್ಯಾಂಕುಗಳಿಗೆ ಏನು ಲಾಭ? – ಸಿಟಿಎಸ್ ಜಾರಿಯಿಂದ ಚೆಕ್ ಇತ್ಯರ್ಥ ಸುಲಭವಾಗುತ್ತದೆ, ಸ್ಥಳೀಯ ಹಾಗೂ ಹೊರ ರಾಜ್ಯದ

ಚೆಕ್‌ಗಳು ಬೇಗ ಇತ್ಯರ್ಥವಾಗುತ್ತವೆ. ಭೌತಿಕ ರವಾನೆ ಇಲ್ಲದ ಕಾರಣ ದಾಖಲೆ ಮಾಹಿತಿಗಳು ನಷ್ಟವಾಗುವುದಾಗಲಿ ಸೋರಿಕೆಯಾಗುವುದಾಗಲಿ ಆಗುವುದಿಲ್ಲ. ಬ್ಯಾಂಕುಗಳ ಕಾರ್ಯನಿರ್ವಹಣಾ ಒತ್ತಡ ಕಡಿಮೆಯಾಗಲಿದೆ. ದತ್ತಾಂಶಗಳನ್ನು ದಾಸ್ತಾವೇಜು ರೂಪದಲ್ಲಿ ಎಷ್ಟು ಅವಧಿಗೆ ಬೇಕಾದರೂ ಸಂಗ್ರಹಿಸಿಡಬಹುದು. ಹೆಚ್ಚಿನ ಭದ್ರತೆ ಜೊತೆಗೆ ಶೀಘ್ರ ಗ್ರಾಹಕ ಸೇವೆ ಸಾಧ್ಯ. ಚೆಕ್ ಇತ್ಯರ್ಥದ ವೆಚ್ಚ ಹಾಗೂ ಮಾನವ ಸಂಪನ್ಮೂಲ ನಿರ್ವಹಣೆಯ ವೆಚ್ಚ ಕೂಡ ಕಡಿಮೆಯಾಗುತ್ತದೆ.

ಸಿಟಿಎಸ್ ಚೆಕ್ ವ್ಯವಸ್ಥೆಗೆ ಒಳಪಡಬೇಕಾದರೆ ಬ್ಯಾಂಕುಗಳೆದುರು ಎರಡು ಮಾರ್ಗಗಳಿವೆ. ಚೆಕ್ ಯಾವ ಬ್ಯಾಂಕಿನಲ್ಲಿ ಇತ್ಯರ್ಥ ಆಗುತ್ತದೋ ಆ ಬ್ಯಾಂಕು ಮತ್ತು ಚೆಕ್ ಕಳುಹಿಸುವ ಬ್ಯಾಂಕು ಎರಡರಲ್ಲೂ ಆರ್‌ಬಿಐ ಸೂಚಿಸಿದ ಮೂಲಸೌಕರ್ಯಗಳಿರಬೇಕು. ಇದನ್ನು ನೇರ ಸದಸ್ಯತ್ವ ಎನ್ನಲಾಗುತ್ತದೆ. ಸೂಚಿತ ಮೂಲಸೌಕರ್ಯಗಳಿಲ್ಲದೇ ಹೋದ ಬ್ಯಾಂಕುಗಳು ಸೌಕರ್ಯಗಳನ್ನು ಹೊಂದಿರುವ ಅಂದರೆ ನೇರ ಸದಸ್ಯತ್ವ ಹೊಂದಿರುವ ಬ್ಯಾಂಕುಗಳ ಮೂಲಸೌಕರ್ಯವನ್ನು ಬಳಸಿಕೊಂಡು ಹೊಸ ವ್ಯವಸ್ಥೆಯನ್ನು ಜಾರಿಗೊಳಿಸಿಕೊಳ್ಳಬಹುದು. ಇದನ್ನು ಪರೋಕ್ಷ ಸದಸ್ಯತ್ವ ಎನ್ನಲಾಗುತ್ತದೆ. 1881ರ ನೆಗೋಷಿಯೇಬಲ್ ಇನಸ್ಟ್ರುಮೆಂಟ್ ಆಕ್ಟ್‌ನ ಸೆಕ್ಷನ್ 6 ಮತ್ತು 1(4) ಹಾಗೂ 81ಎ ಗೆ ತಿದ್ದುಪಡಿ ಮಾಡುವುದರ ಮೂಲಕ ಟ್ರಂಕೇಷನ್ ಚೆಕ್‌ಗಳನ್ನು ಕಾನೂನುಬದ್ಧಗೊಳಿಸಲಾಗಿದೆ. ಈ ವ್ಯವಸ್ಥೆಗೊಳಪಡಲು ಬ್ಯಾಂಕುಗಳ ಮೂಲಭೂತ ಸೌಕರ್ಯಗಳು ಒಂದೇ ಬಗೆಯಲ್ಲಿರಬೇಕಾಗುತ್ತದೆ. ಸಿಟಿಎಸ್‌ಗಾಗಿ ಸೂಚಿಸುವ ತಂತ್ರಾಂಶಗಳು, ಹಾರ್ಡ್‌ವೇರ್‌ಗಳು, ಚೆಕ್‌ಗಳಲ್ಲಿರುವ ಚಿತ್ರಗಳನ್ನು ಗುರುತಿಸಬಲ್ಲ ತಂತ್ರಾಂಶಗಳು, ಸೂಚಿತ ಡಾಟಾಬೇಸ್, ಆಪರೇಟಿಂಗ್ ಸಿಸ್ಟಮ್‌ಗಳನ್ನು ಹೊಂದಬೇಕಾಗುತ್ತದೆ. ಏಕರೂಪದ ಭದ್ರತಾ ಅಂಶಗಳಿರುವ ಸಿಟಿಎಸ್–2010 ಮಾದರಿ ಚೆಕ್‌ಗಳನ್ನು ವಿತರಿಸಲು ಬ್ಯಾಂಕುಗಳಿಗೆ ಡಿಸೆಂಬರ್ 31ರ ಗಡುವನ್ನು ಆರ್‌ಬಿಐ ನೀಡಿತ್ತು, ಹೊಸ ಮಾನದಂಡಗಳ ಜಾರಿಗೆ ಬ್ಯಾಂಕುಗಳು ಕಾಲಾವಕಾಶ ಕೋರಿದ ಹಿನ್ನಲೆಯಲ್ಲಿ ಈ ಗಡುವನ್ನು ಭಾರತೀಯ ರಿಸರ್ವ್ ಬ್ಯಾಂಕ್ 2013 ಮಾರ್ಚ್ 31ರವರೆಗೆ ವಿಸ್ತರಿಸಿದೆ.

ಈ ದಿನಾಂಕದ ನಂತರ ಹಳೇ ಮಾದರಿಯ ಚೆಕ್ ಬಳಕೆ ನಿಲ್ಲಲಿದ್ದು ಗ್ರಾಹಕರು ಈ ದಿನಾಂಕದೊಳಗಾಗಿ ನೂತನ ಮಾದರಿ ಚೆಕ್‌ಗಳನ್ನು ಪಡೆದುಕೊಳ್ಳಬೇಕಿರುತ್ತದೆ. ಭಾರತದ ಹಣಕಾಸು ಕ್ಷೇತ್ರದ ಬದಲಾವಣೆಗಳು ಜನಸಾಮಾನ್ಯರ ಜೀವನದಲ್ಲೂ ಪರಿಣಾಮಗಳನ್ನುಂಟು ಮಾಡುತ್ತಿರುವ ಇಂದಿನ ದಿನಗಳಲ್ಲಿ, ಭಾರತದ ಎಲ್ಲ ಪ್ರಜೆಗಳು ಬ್ಯಾಂಕ್ ಖಾತೆಗಳನ್ನು ಹೊಂದುವಂತೆ ಮಾಡುವುದರ ಮೂಲಕ ಬ್ಯಾಂಕಿಂಗ್ ಕ್ಷೇತ್ರ ವಿಸ್ತಾರಗೊಳ್ಳುತ್ತಿರುವ ಸಂದರ್ಭದಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿನ ಬೆಳವಣಿಗೆಗಳೆಡೆಗೆ ಬ್ಯಾಂಕುಗಳ ಜೊತೆಗೆ ಗ್ರಾಹಕರೂ ನಿರಂತರವಾಗಿ ಅರಿವನ್ನು ವಿಸ್ತರಿಸಿಕೊಳ್ಳಬೇಕಿದೆ. ■

... 16ನೇ ಪುಟದಿಂದ

8. ವಿಚಾರಣಾ ಅವಧಿಯನ್ನು ಹೆಚ್ಚಿಸಲು ಪ್ರಾವಧಾನ ಮಾಡಿದೆ. ವಿಚಾರಣೆಯಲ್ಲಿನ ವಿಷಯಗಳ ವಿರುದ್ಧ ನಿರ್ಣಯ ಕೈಗೊಳ್ಳುವುದನ್ನು ನಿಷೇಧಿಸಿದೆ.
9. ಸದಸ್ಯತ್ವ ನಿರಾಕರಣೆಯ ವಿರುದ್ಧದ ಅಪೀಲನ್ನು ನಿಬಂಧಕರ ಬದಲು ಸಾಮಾನ್ಯ ಸಭೆಗೆ ನೀಡಿದೆ.
10. ಅಪರಾಧ ಮತ್ತು ದಂಡಗಳ ವ್ಯಾಪ್ತಿಗೆ ಇನ್ನಷ್ಟು ವಿಷಯಗಳನ್ನು ತರಲಾಗಿದೆ. ಅವೆಂದರೆ, ವೇತನ ಕಡಿತಕ್ಕೆ ಸಂಬಂಧಿಸಿದ ವಿಷಯಗಳು, ಸಹಕಾರಿಯ ದಾಖಲೆಗಳು, ನಗದು ಇತ್ಯಾದಿಯನ್ನು ಕಾಯ್ದೆಯಡಿ ಅಧಿಕಾರ ಪಡೆದ ವ್ಯಕ್ತಿಗೆ ಹಸ್ತಾಂತರಿಸದಿದ್ದಲ್ಲಿ, ನಿಗದಿತ ಸಮಯದಲ್ಲಿ ಲೆಕ್ಕಪರಿಶೋದನೆ, ಸಾಮಾನ್ಯ ಸಭೆ ನಡೆಸದಿದ್ದಲ್ಲಿ, ನಿಬಂಧಕರಿಗೆ ಮಾಹಿತಿ ಮತ್ತು ವರದಿಗಳನ್ನು ಸಲ್ಲಿಸದಿದ್ದಲ್ಲಿ, ಚುನಾವಣೆ ಅಗತ್ಯ ನೆರವು ನೀಡದಿದ್ದಲ್ಲಿ ಅಥವಾ ಚುನಾವಣೆಯಲ್ಲಿ ಭ್ರಷ್ಟಾಚಾರದಲ್ಲಿ ತೊಡಗಿದಲ್ಲಿ ಅಪರಾಧವೆಂದು ಪರಿಗಣಿಸಲಾಗಿದೆ.
11. ಸಭಾ ನೋಟೀಸ್ ಅನ್ನು ಸದಸ್ಯರಿಗೆ ಬಲ್ಕ್ ಪೋಸ್ಟಿಂಗ್, ನೋಂದಾಯಿತ ಅಂಚೆ, ಇಮೇಲ್, ಎಸ್‌ಎಂಎಸ್, ಸಾಮನ್ಯ ಅಂಚೆಯ ಜೊತೆಯಲ್ಲಿ ವೃತ್ತ ಪತ್ರಿಕೆಯಲ್ಲಿ ಜಹಿರಾತು ಇತ್ಯಾದಿಗಳ ಮೂಲಕ ತಲುಪಿಸಬಹುದು.

ಆರೋಗ್ಯ ಜ್ಯೋತಿ ಯೋಜನೆ – ಅಭಿಪ್ರಾಯ ಕಳುಹಿಸಿ

ರಾಜ್ಯದ ಸೌಹಾರ್ದ ಸಹಕಾರಿಗಳ ಸದಸ್ಯರು, ಆಡಳಿತ ಮಂಡಳಿಯವರು ಸಿಬ್ಬಂದಿಯವರು ಅವರುಗಳು ತಲಾ ಪ್ರತಿ ವಾರ್ಷಿಕ ರೂ. 900/– ಪ್ರೀಮಿಯಮ ಪಾವತಿಸುವ ಮೂಲಕ ಎಲ್ಲ ವಿಧವಾದ ಕಾಯಿಲೆಗಳಿಗೆ ವೈದ್ಯಕೀಯ ಸಲಹೆ, ತಪಾಸಣೆ ಮತ್ತು ಚಿಕಿತ್ಸೆಗಳನ್ನು ನೀಡುವ ವ್ಯವಸ್ಥೆಯನ್ನು "ಹೆಲ್ತ್ ಕೇರ್ ಪ್ರೊಫೇಶನಲ್ ಟ್ರಸ್ಟ ಬೆಂಗಳೂರು ಇವರು ಅತ್ಯಂತ ವ್ಯವಸ್ಥಿತವಾಗಿ ಒದಗಿಸುವ ಯೋಜನೆಯನ್ನು ಪ್ರಾರಂಭಿಸಿದ್ದಾರೆ.

ಪದ್ಮಭೂಷಣ ಡಾ.ದೇವಿಪ್ರಸಾದರವರ ನೇತೃತ್ವದಲ್ಲಿ ಅನೇಕ ತಜ್ಞ ವೈದ್ಯರ ತಂಡ ರಾಜ್ಯದ ವಿವಿಧ ಭಾಗಗಳಲ್ಲಿ ಸಂಸ್ಥೆಯು ಗುರುತಿಸಿದ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ.

ಈ ಬಗ್ಗೆ ಸಂಯುಕ್ತ ಸಹಕಾರಿಗೆ ತಮ್ಮ ಅಭಿಪ್ರಾಯಗಳನ್ನು ಕಳುಹಿಸಿದಲ್ಲಿ ಸೂಕ್ತವಾಗಿ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಒಪ್ಪಂದ ಮಾಡಿಕೊಳ್ಳಲು ಕ್ರಮವಿಡಲಾಗುವುದು.

ಆರ್.ಬಿ.ಐ. ವ್ಯಾಪ್ತಿಗೆ ಕ್ರೆಡಿಟ್ ಸೊಸೈಟಿಗಳು?

- ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಗೆ ಲೋಕಸಭೆಯಲ್ಲಿ ಅನುಮೋದನೆ ನೀಡಿರುವ ಹಿನ್ನಲೆಯಲ್ಲಿ ದೇಶದಲ್ಲಿನ ಕ್ರೆಡಿಟ್ ಸೊಸೈಟಿಗಳು ಇನ್ನುಮುಂದೆ ಆರ್.ಬಿ.ಐ ನಿಂದ ಬ್ಯಾಂಕಿಂಗ ಲೈಸೆನ್ಸ ಪಡೆಯಬೇಕಾಗುತ್ತದೆ.
- ಠೇವಣಿದಾರರ ಹಿತಾಸಕ್ತಿಯನ್ನು ಕಾಪಾಡುವ ದೃಷ್ಟಿಯಿಂದ ಸರಕಾರ ಈ ಕಾಯ್ದೆಗೆ ತಿದ್ದುಪಡಿ ತಂದಿದೆ
- ಈ ಬಗ್ಗೆ ಆರ್.ಬಿ.ಐ ವಿವರವಾದ ಮಾರ್ಗಸೂಚಿಯನ್ನು ಸಧ್ಯದಲ್ಲಿಯೆ ಹೊರಡಿಸಲಿದೆ.

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posted at GPO-MBC Bengaluru Post Office 560001,
Posting Day 12th. Registered No. RNP/BGS/2094/2011-13
RNI No. KARBIL - 2004/18001
Pages 20

ವ್ಯಕ್ತಿ ಪರಿಚಯ

ಸಾಮಾಜಿಕ ಕಳಕಳಿಯ ವೃತ್ತಿನಿರತ ಸಹಕಾರಿ

ಗೋಪಾಲಕೃಷ್ಣ ನಾರಾಯಣ ಹೆಗಡೆ ಹಿರೇಸರ

ಉತ್ತರ ಕನ್ನಡಜಿಲ್ಲೆ ಸಹಕಾರ ಕ್ಷೇತ್ರದಲ್ಲಿ ಅದ್ವಿತಿಯ ಸಾಧನೆ ಮಾಡಿರುವ ಜಿಲ್ಲೆ. ಇಲ್ಲಿನ ಜನರಲ್ಲಿ ಸಹಕಾರಿ ಪ್ರಜ್ಞೆ ರಕ್ತಗತವಾಗಿ ಬೆಳೆದುಬರುತ್ತದೆ. ಅನೇಕ ಉತ್ತಮ ಸಹಕಾರಿ ಸಂಸ್ಥೆಗಳನ್ನು ಮತ್ತು ಉತ್ತಮ ಸಹಕಾರಿ ನಾಯಕರುಗಳನ್ನು ನೀಡಿದ ಜಿಲ್ಲೆ.ಅಂತಹ ವೃತ್ತಿನಿರತ ಸಹಕಾರಿಗಳ ಸಾಲಿನಲ್ಲಿ ಗೋಪಾಲಕೃಷ್ಣ ನಾರಾಯಣ ಹೆಗಡೆಯವರು ಪರಿಗಣಿಸಲಾಗುತ್ತಿದೆ.

ಶ್ರೀ ಗೋಪಾಲಕೃಷ್ಣ ಹೆಗಡೆಯವರು ಮೂಲತಃ ಹಿರೇಸರದವರು. 6–1–1953ರಲ್ಲಿ ಜನನ. ಕುಟುಂಬದ ವೃತ್ತಿ ಕೃಷಿ. ಮಂಚಿಕೆರೆ ಗ್ರಾಮದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ. ನಂತರ ಎಸ್.ಎಸ್.ಎಲ್.ಸಿ.ವರೆಗೆ ಶಿಕ್ಷಣ. ನಂತರದಲ್ಲಿ ಸಾಮಾಜಿಕ ಅಭಿವೃದ್ಧಿಯ ಕಳಕಳಿಯನ್ನು ಹೊಂದಿರುವ ಶ್ರೀಯುತರು ಧಾರ್ಮಿಕ ಪೃವತ್ತಿಯವರು. ಪರಿಸರದ ಸುತ್ತಲಿನ ಎಲ್ಲ ಸಮಾಜದ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಜಾರಿ ಗೊಳಿಸಿದವರು. ವಿ.ಡಿ.ಪಿ.ರಾಜ್ಯ ಅಧ್ಯಕ್ಷರಾಗಿ ಹಿರೇಸರ ಶಾಲಾಬಿವೃದ್ಧಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವ ಸೌಭಾಗ್ಯ ಇವರದ್ದಾಗಿದೆ. ಕರ್ನಾಟಕ ರಾಜ್ಯ ರಕ್ಷಕ ದಳಪತಿಗಳ ಸಂಘ ಬೆಂಗಳೂರು ಇದರ ಅದಕ್ಷರಾಗಿ, ಕರ್ನಾಟಕ ರಾಜ್ಯ ಗ್ರಾಮಾಭಿವೃದ್ಧಿ ಹಾಗೂ ಜಾಗೃತಿ ಸೇವಾ ಸಂಸ್ಥೆ ಬೆಂಗಳೂರುಇದರ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಹಕಾರ ಕ್ಷೇತ್ರದಲ್ಲೂ ಸಹ ಶ್ರೀಯುತ ಸೇವೆ ಶ್ಲಾಘನೀಯ. ಹಿತ್ಲಳ್ಳಿಯ ದೊಡ್ಡ ಪ್ರಮಾಣದ ವಿವಿಧೋ ದ್ದೇಶ ಸಹಕಾರ ಸಂಘದಲ್ಲಿ (ಕೃಷಿ ಸಹಕಾರ ಸಂಘ) ಕಳೆದ 30 ವರ್ಷಗಳಿಂದ ಆಡಳಿತ ಮಂಡಳಿಯ ಸದಸ್ಯರಾಗಿ ಕಾರ್ಯನಿರ್ವಹುತ್ತಿದ್ದಾರೆ. ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ 10 ವರ್ಷಗಳಿಂದ ಆಡಳಿತ ಮಂಡಳಿಯ ಸದಸ್ಯರಾಗಿದ್ದಾರೆ. 7 ವರ್ಷಗಳಿಂದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸೌಹಾರ್ದ ಸಹಕಾರಿ ಕ್ಷೇತ್ರದಲ್ಲೂ ಸಹ ಇವರ ನೇತೃತ್ವದಲ್ಲಿ ಶ್ರೀಮಾತಾ ಸೌಹಾರ್ದ ಸಹಕಾರಿಯನ್ನು ಕಳೆದ 8 ವರ್ಷಗಳ ಹಿಂದೆಯೆ ಸ್ಥಾಪಿಸಿದ್ದಾರೆ. ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಈ ಸಹಕಾರಿಯ ವ್ಯಾಪ್ತಿ ಉತ್ತರ ಕನ್ನಡ ಜಿಲ್ಲೆಯ 8 ತಾಲ್ಲೂಕುಗಳು ಸೇರುತ್ತವೆ. 2500 ಸದಸ್ಯರಿದ್ದಾರೆ. 37 ಲಕ್ಷ ಶೇರು ಬಂಡವಾಳವಿದೆ. 4 ಕೋಟಿ ರೂಗಳ ಠೇವಣಿಯಿದೆ.3 ಕೋಟಿರೂಗಳ ವರೆಗೆ ಸಾಲ ನೀಡಿದ್ದಾರೆ. 95% ವಸೂಲಾತಿ ಇದೆ.

"ಇ" ಸ್ಟಾಂಪಿಂಗ ವ್ಯವಸ್ಥೆ, ವಿವಿಧ ರೀತಿಯ ಸಾಲ ಗಳು, ಚಿನ್ನದ ಸಾಲ, ವ್ಯಯಕ್ತಿಕ ಸಾಲ,ಕೃಷಿ ಉತ್ಪನ್ನಗಳ ಖರೀದಿ ಹಾಗೂ ಬಿಕರಿ, ಕೃಷಿಯೇತರ ಉತ್ಪನ್ನಗಳ ಮಾರಾಟ ಮುಂತಾದ ಅನೇಕ ಚಟುವಟಿಕೆಗಳನ್ನು ನಿರ್ವಹಿಸಲಾಗುತ್ತಿದೆ. ಅದರ ಜೊತೆಯಲ್ಲಿ ಸದಸ್ಯರ ಆಕಸ್ಮಿಕ ಮರಣ ಸಂದರ್ಭದಲ್ಲಿ ಗ್ರೂಪ ಇನ್ಸುರನ್ಸ ವ್ಯವಸ್ಥೆ ಮಡಿದ್ದಾರೆ. ಅಂಗವಿಕಲರಿಗೆ ಧನಸಹಾಯ ಉಚಿತ ಆರೋಗ್ಯ ಶಿಬಿರಗಳನ್ನು ನಡೆಸಿ ಸದಸ್ಯರ ಆರೋಗ್ಯದ ಬಗ್ಗೆಯೂ ಹೆಚ್ಚಿ ಕಾಳಜಿ ವಹಿಸಲಾಗುತ್ತದೆ.

ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸೌಹಾರ್ದ ಸಹಕಾರಿಗಳ ಕಾರ್ಯ ನಿರ್ವಹಣೆಯ ಬಗ್ಗೆ ಸಂತೋಷ ವ್ಯಕ್ತ ಪಡಿಸುವ ಶ್ರೀಯುತರು ಸೌಹಾರ್ದ ಸಹಕಾರಿ ಕಾಯ್ದೆ ಒಂದು ಉತ್ತಮ ಕಾಯ್ದೆ. ಸದಸ್ಯರಿಗೆ ಹೆಚ್ಚಿನ ಪ್ರಮಾಣದಲ್ಲಿ ಸೇವೆ ಒದಗಿಸಲು ಉತ್ತಮ ಅವಕಾಶಗಳಿವೆ.

ಈ ಕ್ಷೇತ್ರದ ಮೂಲಕ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಯೋಜನೆಗಳ ಪ್ರಯೋಜನ ಪಡೆದುಕೊಳ್ಳಲು ಮಹಿಳೆಯರಿಗೆ ಹಾಗೂ ಯುವಕರಿಗೆ ಹೆಚ್ಚಿನ ಅವಕಾಶಗಳಿವೆ.ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಹಾಗೂ ಯುವಕರು ಈ ಕ್ಷೇತ್ರಕ್ಕೆ ಬರುವ ಅವಶ್ಯಕತೆಯಿದೆ ಎಂದು ಅಭಿಪ್ರಾಯ ಪಡುತ್ತಾರೆ. ■

LEadEr of LEadErS - KarnataKa StatE Souharda fEdEraL Co-op-Ltd BangaLorE

ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು

ಅಧ್ಯಕ್ಷ	ಶ್ರೀ ಎಸ್. ಆರ್. ಸತೀಶಚಂದ್ರ	9448696108
ಉಪಾಧ್ಯಕ್ಷ	ಶ್ರೀ ಗುರುನಾಥ ಜ್ಯಾಂತೀಕರ	9448270104
ವ್ಯವಸ್ಥಾಪಕ ನಿರ್ದೇಶಕ	ಶ್ರೀ ಶರಣಗೌಡ ಜಿ. ಪಾಟೀಲ	9740401685
ಉಪ ಪ್ರಧಾನ ವ್ಯವಸ್ಥಾಪಕ	ಶ್ರೀ ನಾರಾಯಣ ಹೆಗಡೆ	9480579882
ಉಪ ಪ್ರಧಾನ ವ್ಯವಸ್ಥಾಪಕ	ಶ್ರೀ ವೈ. ಕುಮಾರ	9845893455
ತರಬೇತಿ ಅಧಿಕಾರಿ	ಶ್ರೀ ವಿ.ಜೆ. ಕಾರಕೂನ	9482734077
ಕಾನೂನು ವಿಭಾಗದ ಅಧಿಕಾರಿ	ಶ್ರೀ ಶ್ರೀಕಾಂತ	9916814888
ಬೆಂಗಳೂರು ವಿಭಾಗಾಧಿಕಾರಿ	ಶ್ರೀ ರಘುನಂದನ್ ಕೆ.	9481036592
ಬೆಳಗಾವಿ ವಿಭಾಗಾಧಿಕಾರಿ	ಶ್ರೀ ಜಿ.ಎಸ್. ಟೋಪಣ್ಣನವರ್	9916367887
ಗುಲ್ಬರ್ಗಾ ವಿಭಾಗಾಧಿಕಾರಿ	ಶ್ರೀ ಸಂಜಯ ಕೋರಟಕರ	9900990268
ಮೈಸೂರು ವಿಭಾಗಾಧಿಕಾರಿ	ಶ್ರೀ ಶಿವಕುಮಾರ ಬಿರಾದಾರ	9844454995

ಇವರಿಂದ ಪ್ರಕಟಿತ :
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು – 10.
web : www.souharda.coop,
E-mail : souharada@souharada.coop,
ದೂ.ಸಂ : 23378375/76/77/78/79/80 & 23474408, 23573291
ಸಂಪಾದಕ, ಪ್ರಕಾಶಕ : **ಶರಣಗೌಡ ಜಿ. ಪಾಟೀಲ**
ಸಂಚಿಕೆ ಸಿದ್ಧತೆ : **ವಿ.ಜೆ.ಕಾರಕೂನ**
ಮುದ್ರಣ : **ವರ್ಣ ಕಮ್ಯುನಿಕೇಷನ್ಸ್**, ಬೆಂಗಳೂರು.

ಬೆಳಗಾವಿ ವಿಭಾಗೀಯ ಕಛೇರಿ ವಿಳಾಸ : ನಂ. 436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ – 1, ದೂ. 0831–2401551
ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ : ನಂ. ಡಿ–02, 1ನೇ ಮಹಡಿ, ಶ್ರೀ ಗಜಾನನ ಫ್ಲಾವರ್ ವ್ಯಾಲಿ, ಗುಡ್–ಲಕ್ ಹೋಟೆಲ್ ಎದುರು, ಖೂಬಾ ಪ್ಲಾಟ್, ಗುಲಬರ್ಗಾ– 585103. ದೂ;08472–270222, ಮೊ : 9900990268